34. ಯಾವುದಾದರೂ ಎರಡು ವಿಧಗಳ ದೂರಸಂಪರ್ಕ ಸೇವೆಗಳನ್ನು ತಿಳಿಸಿ.
35. ಸಾರಿಗೆ ಸೇವೆಗಳು ಎಂದರೇನು?
36. ಯಾವುದಾದರೂ ಎರಡು ಪ್ರಕಾರಗಳ ದಾಸ್ತಾನು ಮಳಿಗೆಗಳನ್ನು ತಿಳಿಸಿ.
37. ಖಾಸಗಿ ದಾಸ್ತಾನು ಮಳಿಗೆಗಳೆಂದರೇನು?
38. ಸಾರ್ವಜನಿಕ ದಾಸ್ತಾನು ಮಳಿಗೆಗಳೆಂದರೇನು?
39. ಕರಾರುಬದ್ಧ ದಾಸ್ತಾನು ಮಳಿಗೆಗಳೆಂದರೇನು?
40. ಸರ್ಕಾರಿ ದಾಸ್ತಾನು ಮಳಿಗೆಗಳೆಂದರೇನು?
41. ದಾಸ್ತಾನುಗಾರಿಕೆಯ ಯಾವುದಾದರೂ ಎರಡು ಕಾರ್ಯಗಳನ್ನು ತಿಳಿಸಿ.
42. ದಾಸ್ತಾನುಗಾರಿಕೆಯಲ್ಲಿ ಕ್ರೋಡೀಕರಣ ಕಾರ್ಯದ ಅರ್ಥವೇನು?

ನಾಲ್ಕು ಅಂಕಗಳ ಪ್ರಶ್ನೆಗಳು

1. ಸೇವೆಗಳ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಸರಕುಗಳು ಮತ್ತು ಸೇವೆಗಳಿಗಿರುವ ಯಾವುದಾದರೂ ನಾಲ್ಕು ವ್ಯತ್ಯಾಸಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಸೇವೆಗಳ ಅರ್ಥವನ್ನು ಕೊಡಿ ಮತ್ತು ಸೇವೆಗಳ ವಿಶಾಲ ವಿಭಾಗಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

4. ವಿವಿಧ ಪ್ರಕಾರಗಳ ಬ್ಯಾಂಕುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5. ವಾಣಿಜ್ಯ ಬ್ಯಾಂಕುಗಳ ಕಾರ್ಯಗಳನ್ನು ವಿವರಿಸಿ.
6. ಇ–ಬ್ಯಾಂಕಿಂಗ್ ಎಂದರೇನು? ಅದರಿಂದ ಬ್ಯಾಂಕುಗಳಿಗಾಗುವ ಪ್ರಯೋಜನಗಳೇನು?
7. ಗ್ರಾಹಕರಿಗೆ ಇ–ಬ್ಯಾಂಕಿಂಗ್‌ನಿಂದ ಆಗುವ ಪ್ರಯೋಜನಗಳೇನು?
8. ಜೀವವಿಮೆಗೆ ಅನ್ವಯವಾಗುವ ವಿಮೆಯ ಮೂಲತತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
9. ಜೀವವಿಮಾ ಒಪ್ಪಂದದ ಪ್ರಮುಖ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
10. ಸಂಕ್ಷಿಪ್ತವಾಗಿ ವಿವರಿಸಿ: (ಅ) ಅಗ್ನಿ ವಿಮೆ (ಆ) ಕಡಲ ವಿಮೆ
11. ಜೀವವಿಮಾ ಪಾಲಿಸಿಗಳ ಯಾವುದಾದರೂ ನಾಲ್ಕು ವಿಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
12. ಕಡಲ ವಿಮೆ ಎಂದರೇನು? ಕಡಲ ವಿಮೆಯ ಮೂರು ವಸ್ತು ವಿಷಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
13. ವಿವಿಧ ಅಂಚೆ ಸೇವೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
14. ಯಾವುದಾದರೂ ನಾಲ್ಕು ಪ್ರಕಾರಗಳ ದೂರಸಂಪರ್ಕ ಸೇವೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
15. ಸಾರಿಗೆ ಸೇವೆಗಳ ಬಗ್ಗೆ ಲಘು ಟಿಪ್ಪಣಿಯನ್ನು ಬರೆಯಿರಿ.
16. ದಾಸ್ತಾನುಮಳಿಗೆಗಳ ಯಾವುದಾದರೂ ನಾಲ್ಕು ವಿಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
17. ದಾಸ್ತಾನುಗಾರಿಕೆಯ ಯಾವುದಾದರೂ ನಾಲ್ಕು ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಎಂಟು ಅಂಕಗಳ ಪ್ರಶ್ನೆಗಳು

1. ಸೇವೆಗಳ ಅರ್ಥವನ್ನು ಕೊಡಿ ಮತ್ತು ಸೇವೆಗಳ ಸ್ವರೂಪವನ್ನು ವಿವರಿಸಿ.
2. ವಾಣಿಜ್ಯ ಬ್ಯಾಂಕುಗಳೆಂದರೇನು? ಅವುಗಳ ವಿವಿಧ ಕಾರ್ಯಗಳನ್ನು ವಿವರಿಸಿ.
3. ವಿಮೆಯ ತತ್ವಗಳನ್ನು ವಿವರಿಸಿ.
4. ವಿವಿಧ ವಿಧಗಳ ವಿಮೆಯನ್ನು ವಿವರಿಸಿ.
5. ಸಂವಹನ ಸೇವೆಗಳ ಬಗ್ಗೆ ಒಂದು ವಿವರವಾದ ಟಿಪ್ಪಣಿಯನ್ನು ಬರೆಯಿರಿ.
6. ದಾಸ್ತಾನುಗಾರಿಕೆ ಎಂದರೇನು? ದಾಸ್ತಾನುಗಾರಿಕೆಯ ಕಾರ್ಯಗಳನ್ನು ವಿವರಿಸಿ.
7. ದಾಸ್ತಾನುಗಾರಿಕೆಯ ಅರ್ಥವನ್ನು ಕೊಡಿ ಮತ್ತು ವಿವಿಧ ಪ್ರಕಾರಗಳ ದಾಸ್ತಾನು ಮಳಿಗೆಗಳನ್ನು ವಿವರಿಸಿ.

ಅಧ್ಯಾಯ 5

ವ್ಯವಹಾರದ ಉದಯಿಸುತ್ತಿರುವ ಪದ್ಧತಿಗಳು

ಒಂದು ಅಂಕದ ಪ್ರಶ್ನೆಗಳು

1. ಪ್ರಸ್ತುತ ವ್ಯವಹಾರವನ್ನು ರೂಪಿಸುತ್ತಿರುವ ಯಾವುದಾದರೊಂದು ಪ್ರಬಲ ಪ್ರವೃತ್ತಿಯನ್ನು ತಿಳಿಸಿ.
2. ಡಿಜಿಟೈಜ಼ೇಷನ್ ಎಂದರೇನು?
3. ವಿದ್ಯಾರ್ಥಿಗಳು ಅಥವಾ ಗ್ರಾಹಕರಿಗೆ ಅತ್ಯಂತ ಪರಿಚಿತವಾಗಿರುವ ನೆಟ್‌ವರ್ಕ್ ಅನ್ನು ಹೆಸರಿಸಿ.
4. 'ಇ–ವಾಣಿಜ್ಯ' ಎಂದರೇನು?
5. B2B ಎಂದರೇನು?
6. B2C ಎಂದರೇನು?
7. Intra-B ಎಂದರೇನು?
8. C2C ಎಂದರೇನು?
9. B2E ಎಂದರೇನು?
10. BPO ಅನ್ನು ವಿಸ್ತರಿಸಿ ಬರೆಯಿರಿ.
11. C2C ಬಗೆಯ ವ್ಯವಹಾರ ಸಂಸ್ಥೆಗೆ ಒಂದು ಉದಾಹರಣೆಯನ್ನು ಕೊಡಿ.

12. B2C ಗೆ ಒಂದು ಉದಾಹರಣೆಯನ್ನು ಕೊಡಿ.
13. ಇ–ವ್ಯವಹಾರದ ಯಾವುದಾದರೊಂದು ಅನುಕೂಲತೆಯನ್ನು ತಿಳಿಸಿ.
14. ಇ–ವ್ಯವಹಾರದ ಯಾವುದಾದರೊಂದು ಮಿತಿಯನ್ನು ತಿಳಿಸಿ.
15. ಇ–ವ್ಯವಹಾರದ ಯಾವುದಾದರೊಂದು ಆತಂಕ/ಅಪಾಯವನ್ನು ತಿಳಿಸಿ.
16. ಆನ್‌ಲೈನ್ ವಹಿವಾಟುಗಳಲ್ಲಿ ಪಾವತಿಯ ಯಾವುದಾದರೊಂದು ವಿಧಾನವನ್ನು ತಿಳಿಸಿ.
17. ಪ್ಲಾಸ್ಟಿಕ್ ಹಣ ಎಂದರೇನು?
18. ಇ–ವ್ಯವಹಾರದ ಯಶಸ್ವೀ ಅನುಷ್ಠಾನಕ್ಕೆ ಅಗತ್ಯವಾದ ಯಾವುದಾದರೊಂದು ಸಂಪನ್ಮೂಲವನ್ನು ತಿಳಿಸಿ.
19. ಹೊರಗುತ್ತಿಗೆಗೆ ಇರುವ ಯಾವುದಾದರೊಂದು ಆತಂಕವನ್ನು ತಿಳಿಸಿ.
20. ತನ್ನ ಮೂಲ ಕಂಪನಿ ಮತ್ತು ಶಾಖೆಗಳಿಗಾಗಿ ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಬದ್ಧ ಬಿ.ಪಿ.ಓ. ಘಟಕಕ್ಕೆ ಒಂದು ಉದಾಹರಣೆ ಕೊಡಿ.
21. SSL ಅನ್ನು ವಿಸ್ತರಿಸಿ ಬರೆಯಿರಿ.
22. VIRUS ಅನ್ನು ವಿಸ್ತರಿಸಿ ಬರೆಯಿರಿ.
23. ಇ–ವ್ಯವಹಾರದ ಯಾವುದಾದರೊಂದು ಅನ್ವಯಿಕೆಯನ್ನು ತಿಳಿಸಿ.

ಒಂದು ಅಂಕದ ಬಹು ಆಯ್ಕೆ ಪ್ರಶ್ನೆಗಳು

1. ಇ–ವಾಣಿಜ್ಯದಲ್ಲಿ ಸೇರಿಲ್ಲದಿರುವುದು

ಎ) ಪೂರೈಕೆದಾರರೊಂದಿಗೆ ವ್ಯವಹಾರದ ಪರಸ್ಪರ ಸಂಪರ್ಕ
ಬಿ) ಗ್ರಾಹಕರೊಂದಿಗೆ ವ್ಯವಹಾರದ ಪರಸ್ಪರ ಸಂಪರ್ಕ
ಸಿ) ವ್ಯವಹಾರವೊಂದರ ವಿವಿಧ ವಿಭಾಗಗಳ ನಡುವಿನ ಪರಸ್ಪರ ಸಂಪರ್ಕ
ಡಿ) ಭೌಗೋಳಿಕವಾಗಿ ಹರಡಿರುವ ವ್ಯವಹಾರದ ಘಟಕಗಳ ನಡುವಿನ ಪರಸ್ಪರ ಸಂಬಂಧ

2. ಒಂದು ಕರೆ ಕೇಂದ್ರವು

ಎ) ಕೇವಲ ಅಂತಃ–ಬಂಧ ಧ್ವನಿ ಆಧಾರಿತ ವ್ಯವಹಾರವನ್ನು ನಿರ್ವಹಿಸುತ್ತದೆ
ಬಿ) ಕೇವಲ ಬಾಹ್ಯ–ಬಂಧ ಧ್ವನಿ ಆಧಾರಿತ ವ್ಯವಹಾರವನ್ನು ನಿರ್ವಹಿಸುತ್ತದೆ
ಸಿ) ಧ್ವನಿ ಆಧಾರಿತ ಹಾಗೂ ಧ್ವನಿ ಆಧಾರಿತವಲ್ಲದ ವ್ಯವಹಾರಗಳೆರಡನ್ನೂ ನಿರ್ವಹಿಸುತ್ತದೆ
ಡಿ) ಗ್ರಾಹಕ ಮುಖಾಮುಖಿ ಹಾಗೂ ಹಿಮ್ಮುಖಿ ವ್ಯವಹಾರಗಳೆರಡನ್ನೂ ನಿರ್ವಹಿಸುತ್ತದೆ

3. ಇ–ವ್ಯವಹಾರಕ್ಕೆ ಅತಿ ಹೆಚ್ಚು ಸೂಕ್ತವಾದ ಪಾವತಿ ವಿಧಾನ

ಎ) ವಿಲೇವಾರಿಯ ನಂತರ ನಗದು ಬಿ) ಚೆಕ್ಕುಗಳು ಸಿ) ಕ್ರೆಡಿಟ್ & ಡೆಬಿಟ್ ಕಾರ್ಡುಗಳು ಡಿ) ಇ–ನಗದು

ಎರಡು ಅಂಕಗಳ ಪ್ರಶ್ನೆಗಳು

1. ಪ್ರಸ್ತುತ ವ್ಯವಹಾರವನ್ನು ರೂಪಿಸುತ್ತಿರುವ ಯಾವುದಾದರೂ ಎರಡು ಪ್ರಬಲ ಪ್ರವೃತ್ತಿಗಳನ್ನು ತಿಳಿಸಿ.
2. ಇ–ವ್ಯವಹಾರ ಮತ್ತು ಇ–ವಾಣಿಜ್ಯಗಳ ವ್ಯತ್ಯಾಸ ತಿಳಿಸಿ.
3. ಇಂಟ್ರಾ–ಬಿ ವಾಣಿಜ್ಯ ಎಂದರೇನು?
4. ಸಾಂಪ್ರದಾಯಿಕ ವ್ಯವಹಾರ ಮತ್ತು ಇ–ವ್ಯವಹಾರಗಳ ನಡುವೆ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.
5. ಇ–ವ್ಯವಹಾರದ ಯಾವುದಾದರೂ ಎರಡು ಲಾಭಗಳನ್ನು ತಿಳಿಸಿ.
6. ಇ–ವ್ಯವಹಾರದ ಯಾವುದಾದರೂ ಎರಡು ಮಿತಿಗಳನ್ನು ತಿಳಿಸಿ.

7. ಇ–ವ್ಯವಹಾರದ ಯಾವುದಾದರೂ ಎರಡು ಆತಂಕ/ಅಪಾಯಗಳನ್ನು ತಿಳಿಸಿ.
8. ಗುಪ್ತಾಕ್ಷರಲೇಖ (ಕ್ರಿಪ್ಟೋಗ್ರಫಿ) ಎಂದರೇನು?
9. 'ಕುಕೀಸ್' ಎಂಬುದರ ಅರ್ಥ ಕೊಡಿ.
10. ಆನ್‌ಲೈನ್ ವಹಿವಾಟುಗಳಲ್ಲಿ ಪಾವತಿಯ ಯಾವುದಾದರೂ ಎರಡು ವಿಧಾನಗಳನ್ನು ತಿಳಿಸಿ.
11. ಪೇಪಾಲ್ ಎಂದರೇನು?
12. ಇ–ವ್ಯವಹಾರದ ಯಶಸ್ವೀ ಅನುಷ್ಠಾನಕ್ಕೆ ಅಗತ್ಯವಾದ ಯಾವುದಾದರೂ ಎರಡು ಸಂಪನ್ಮೂಲಗಳನ್ನು ತಿಳಿಸಿ.
13. ಹೊರಗುತ್ತಿಗೆಯ ಅರ್ಥವನ್ನು ಕೊಡಿರಿ.
14. ಕರೆ ಕೆಂದ್ರಗಳು ಯಾವ ಸೇವೆಗಳನ್ನು ಒದಗಿಸುತ್ತವೆ?
15. ಹೊರಗುತ್ತಿಗೆಯ ಪರಿಭಾಷೆಯಲ್ಲಿ ಲಂಬಾತ್ಮಕಗಳ ಅರ್ಥವನ್ನು ಕೊಡಿ.
16. ಹೊರಗುತ್ತಿಗೆಯ ಪರಿಭಾಷೆಯಲ್ಲಿ ಸಮತಲಾತ್ಮಕಗಳ ಅರ್ಥವನ್ನು ಕೊಡಿ.

ನಾಲ್ಕು ಅಂಕಗಳ ಪ್ರಶ್ನೆಗಳು

1. ಸಾಂಪ್ರದಾಯಿಕ ವ್ಯವಹಾರ ಮತ್ತು ಇ–ವ್ಯವಹಾರಗಳ ನಡುವೆ ಇರುವ ಯಾವುದಾದರೂ ನಾಲ್ಕು ವ್ಯತ್ಯಾಸಗಳನ್ನು ಬರೆಯಿರಿ.
2. ಆನ್‌ಲೈನ್ ವಹಿವಾಟುಗಳಲ್ಲಿ ಒಳಗೊಳ್ಳುವ ಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಇ–ವ್ಯವಹಾರದ ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.
4. ಇ–ವ್ಯವಹಾರದ ಯಾವುದಾದರೂ ನಾಲ್ಕು ಪ್ರಯೋಜನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5. ಇ–ವ್ಯವಹಾರದ ಯಾವುದಾದರೂ ನಾಲ್ಕು ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
6. ಆನ್‌ಲೈನ್ ವಹಿವಾಟುಗಳಲ್ಲಿ ಪಾವತಿಯ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
7. ಇ–ವ್ಯವಹಾರದಲ್ಲಿ ಒಳಗೊಳ್ಳುವ ಆತಂಕ/ಅಪಾಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
8. ಹೊರಗುತ್ತಿಗೆ ಎಂದರೇನು? ಅದರ ಪ್ರಮುಖ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
9. ಹೊರಗುತ್ತಿಗೆಯ ಅಗತ್ಯವನ್ನು ಸ್ಪಷ್ಟೀಕರಿಸಲು ಯಾವುದಾದರೂ ನಾಲ್ಕು ಕಾರಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
10. ಹೊರಗುತ್ತಿಗೆಗೆ ಎದುರಾಗುವ ಆತಂಕಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಧ್ಯಾಯ 6

ವ್ಯವಹಾರದ ಸಾಮಾಜಿಕ ಹೊಣೆಗಾರಿಕೆಗಳು ಮತ್ತು ವ್ಯವಹಾರದ ನೈತಿಕತೆ

ಒಂದು ಅಂಕದ ಪ್ರಶ್ನೆಗಳು

1. ಸಾಮಾಜಿಕವಾಗಿ ಅಪೇಕ್ಷಣೀಯವಾದ ವ್ಯವಹಾರದ ಒಂದು ಆಚರಣೆಯನ್ನು ತಿಳಿಸಿ.
2. ಸಾಮಾಜಿಕ ಹೊಣೆಗಾರಿಕೆಯ ಯಾವುದಾದರೊಂದು ವಿಧವನ್ನು ತಿಳಿಸಿ.
3. ಮಾಲಿನ್ಯದ ಪ್ರಮುಖ ಮೂಲವನ್ನು ತಿಳಿಸಿ.
4. ಮಾಲಿನ್ಯದ ಯಾವುದಾದರೂ ಒಂದು ವಿಧವನ್ನು ತಿಳಿಸಿ.
5. ಭೂಮಾಲಿನ್ಯ ಹೇಗೆ ಉಂಟಾಗುತ್ತದೆ?
6. ಮಾಲಿನ್ಯ ನಿಯಂತ್ರಣದ ಒಂದು ಅಗತ್ಯವನ್ನು ತಿಳಿಸಿ.
7. ಪರಸರ ಸಂರಕ್ಷಣೆಗಾಗಿ ವ್ಯವಹಾರ ಸಂಸ್ಥೆಗಳು ತೆಗೆದುಕೊಳ್ಳಬೇಕಾದ ಯಾವುದಾದರೊಂದು ಕ್ರಮವನ್ನು ತಿಳಿಸಿ.
8. ವ್ಯವಹಾರದ ನೈತಿಕತೆಗೆ ಒಂದು ಉದಾಹರಣೆಯನ್ನು ಕೊಡಿ.
9. ವ್ಯವಹಾರದ ನೈತಿಕತೆಯ ಯಾವುದಾದರೊಂದು ಅಂಶವನ್ನು ತಿಳಿಸಿ.
10. ವ್ಯವಹಾರದ ನೈತಿಕತೆಯ ಕಾರ್ಯಕ್ರಮಗಳಲ್ಲಿ ಯಾರ ಪಾಲ್ಗೊಳ್ಳುವಿಕೆ ಅತ್ಯಂತ ಅಗತ್ಯವಾಗಿದೆ?
11. CSR ಅನ್ನು ವಿಸ್ತರಿಸಿ.

ಒಂದು ಅಂಕದ ಬಹು ಆಯ್ಕೆ ಪ್ರಶ್ನೆಗಳು

1. ಸಾಮಾಜಿಕ ಹೊಣೆಗಾರಿಕೆಯು
   ಎ. ಕಾನೂನುಬದ್ಧ ಹೊಣೆಗಾರಿಕೆಗೆ ಸಮವಾಗಿದೆ ಬಿ. ಕಾನೂನುಬದ್ಧ ಹೊಣೆಗಾರಿಕೆಗಿಂತ ವಿಸ್ತಾರವಾಗಿದೆ.
   ಸಿ. ಶಾಸನಬದ್ಧ ಹೊಣೆಗಾರಿಕೆಗಿಂತ ಕಿರಿದಾಗಿದೆ. ಡಿ. ಯಾವುದೂ ಅಲ್ಲ
2. ವ್ಯವಹಾರವು ವೈವಿಧ್ಯವಾದ ಮತ್ತು ಸಂಕೀರ್ಣವಾದ ಸಮಸ್ಯೆಗಳಿಂದ ತುಂಬಿದ ಸಮಾಜದಲ್ಲಿ ಕಾರ್ಯ ನಿರ್ವಹಿಸುವಾಗ, ಅದರ

   ಎ. ಯಶಸ್ಸಿನ ಸಾಧ್ಯತೆಗಳು ಅತ್ಯಲ್ಪ ಬಿ. ಯಶಸ್ಸಿನ ಸಾಧ್ಯತೆಗಳು ಹೆಚ್ಚು

   ಸಿ. ಸೋಲಿನ ಸಾಧ್ಯತೆಗಳು ಅತ್ಯಲ್ಪ ಡಿ. ಯಶಸ್ಸು ಅಥವಾ ಸೋಲಿನೊಂದಿಗೆ ಯಾವುದೇ ಸಂಬಂಧವಿಲ್ಲ.

3. ವ್ಯವಹಾರ ಸಂಸ್ಥೆಯು ಒಬ್ಬ ಉತ್ತಮ ಪ್ರಜೆಯ ಹಾಗೆ ವರ್ತಿಸಬೇಕು ಎನ್ನುವುದು ಈ ಆಸಕ್ತ ಗುಂಪಿಗೆ ಸಂಬಂಧಿಸಿದ ವ್ಯವಹಾರದ ಹೊಣೆಗಾರಿಕೆಯಾಗಿದೆ.

   ಎ. ಮಾಲೀಕರು ಬಿ. ಕಾರ್ಮಿಕರು ಸಿ. ಗ್ರಾಹಕರು ಡಿ. ಸಮುದಾಯ

4. ಇವರ ಪ್ರಯತ್ನದಿಂದ ಪರಿಸರ ಸಂರಕ್ಷಣೆಯನ್ನು ಉತ್ತಮವಾಗಿ ಮಾಡಬಹುದು.

   ಎ. ವ್ಯವಹಾರೋದ್ಯಮಿಗಳು ಬಿ. ಸರಕಾರ ಸಿ. ವಿಜ್ಞಾನಿಗಳು ಡಿ. ಎಲ್ಲಾ ಜನರು

5. ವಾಹನಗಳು ಹೊರಸೂಸುವ ಕಾರ್ಬನ್ ಮಾನಾಕ್ಸೈಡ್ ನೇರವಾಗಿ ಈ ಮಾಲಿನ್ಯಕ್ಕೆ ಕೊಡುಗೆಯನ್ನು ನೀಡುತ್ತದೆ.

   ಎ. ಜಲ ಮಾಲಿನ್ಯ ಬಿ. ಶಬ್ದ ಮಾಲಿನ್ಯ ಸಿ. ಭೂ ಮಾಲಿನ್ಯ ಡಿ. ವಾಯು ಮಾಲಿನ್ಯ

6. ಕೆಳಗಿನವುಗಳಲ್ಲಿ ಯಾವುದು ಮಾಲಿನ್ಯ ನಿಯಂತ್ರಣದ ಅಗತ್ಯವನ್ನು ವಿವರಿಸುತ್ತದೆ?

   ಎ. ವೆಚ್ಚದ ಉಳಿತಾಯ ಬಿ. ಹೊಣೆಗಾರಿಕೆಯ ತೊಂದರೆಯನ್ನು ತಗ್ಗಿಸುವುದು

   ಸಿ. ಆರೋಗ್ಯದ ಅಪಾಯಗಳ ಇಳಿಕೆ ಡಿ. ಮೇಲಿನ ಎಲ್ಲವೂ

7. ಕೆಳಗಿನವುಗಳಲ್ಲಿ ಯಾವುದು ಸಮಾಜಕ್ಕೆ ಗರಿಷ್ಠ ಒಳಿತನ್ನು ಮಾಡಲು ಸಮರ್ಥವಾಗಿದೆ?

   ಎ. ವ್ಯವಹಾರದ ಯಶಸ್ಸು ಬಿ. ಕಾನೂನು ಮತ್ತು ನಿಯಮಗಳು ಸಿ. ನೈತಿಕತೆ ಡಿ. ವೃತ್ತಿಪರ ನಿರ್ವಹಣೆ

ಎರಡು ಅಂಕಗಳ ಪ್ರಶ್ನೆಗಳು

1. ವ್ಯವಹಾರದ ಸಾಮಾಜಿಕ ಹೊಣೆಗಾರಿಕೆ ಎಂದರೇನು?
2. ಸಾಮಾಜಿಕ ಹೊಣೆಗಾರಿಕೆಯು ಕಾನೂನುಬದ್ಧ ಹೊಣೆಗಾರಿಕೆಗಿಂತ ಹೇಗೆ ಭಿನ್ನವಾಗಿದೆ?
3. ಕೆಲಸಗಾರರಿಗೆ ಸಂಬಂಧಿಸಿದಂತೆ ವ್ಯವಹಾರದ ಯಾವುದಾದರೂ ಎರಡು ಹೊಣೆಗಾರಿಕೆಗಳನ್ನು ತಿಳಿಸಿ.
4. ಸರ್ಕಾರಕ್ಕೆ ಸಂಬಂಧಿಸಿದಂತೆ ವ್ಯವಹಾರವು ತನ್ನ ಹೊಣೆಗಾರಿಕೆಯನ್ನು ಯಾವ ರೀತಿಗಳಲ್ಲಿ ನಿಭಾಯಿಸಬಹುದು?
5. ಪರಿಸರದ ಅರ್ಥವನ್ನು ಕೊಡಿ.
6. ಪರಿಸರ ಮಾಲಿನ್ಯದ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
7. ಮಾಲಿನ್ಯ ನಿಯಂತ್ರಣವನ್ನು ಪುಷ್ಟೀಕರಿಸುವ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
8. ಮಾಲಿನ್ಯದ ಯಾವುದಾದರೂ ಎರಡು ಪರಿಣಾಮಗಳನ್ನು ತಿಳಿಸಿ.
9. ವ್ಯವಹಾರದ ನೈತಿಕತೆ ಎಂದರೇನು?
10. ವ್ಯವಹಾರದ ನೈತಿಕತೆಯ ಯಾವುದಾದರೂ ಎರಡು ಅಂಶಗಳನ್ನು ತಿಳಿಸಿ.

ನಾಲ್ಕು ಅಂಕಗಳ ಪ್ರಶ್ನೆಗಳು

1. ಸಾಮಾಜಿಕ ಹೊಣೆಗಾರಿಕೆಯ ಪರವಾಗಿರುವ ಯಾವುದಾದರೂ ನಾಲ್ಕು ವಾದಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಸಾಮಾಜಿಕ ಹೊಣೆಗಾರಿಕೆಯ ವಿರುದ್ಧವಾಗಿರುವ ವಾದಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಸಾಮಾಜಿಕ ಹೊಣೆಗಾರಿಕೆಗೆ ಸಂಬಂಧಿಸಿದಂತೆ ವ್ಯವಹಾರ ಸಂಸ್ಥೆಗಳ ಹೆಚ್ಚುತ್ತಿರುವ ಕಾಳಜಿಗೆ ಹೊಣೆಯಾಗಿರುವ ಯಾವುದಾದರೂ ನಾಲ್ಕು ಕಾರಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
4. ವ್ಯವಹಾರದ ಸಾಮಾಜಿಕ ಹೊಣೆಗಾರಿಕೆಯ ವಿವಿಧ ಕ್ಷೇತ್ರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5. ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ವ್ಯವಹಾರದ ಸಾಮಾಜಿಕ ಹೊಣೆಗಾರಿಕೆಯನ್ನು ವಿವರಿಸಿ:
   (ಅ) ಶೇರುದಾರರು (ಆ) ಗ್ರಾಹಕರು
6. ಮಾಲಿನ್ಯದ ಕಾರಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
7. ಮಾಲಿನ್ಯದ ವಿವಿಧ ವಿಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
8. ಮಾಲಿನ್ಯ ನಿಯಂತ್ರಣದ ಅಗತ್ಯವನ್ನು ಪುಷ್ಟೀಕರಿಸುವ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
9. ಪರಿಸರ ರಕ್ಷಣೆಗಾಗಿ ವ್ಯವಹಾರ ಸಂಸ್ಥೆಗಳು ತೆಗೆದುಕೊಳ್ಳಬೇಕಾದ ಯಾವುದಾದರೂ ನಾಲ್ಕು ಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
10. ವ್ಯವಹಾರದ ನೈತಿಕತೆಯ ಯಾವುದಾದರೂ ನಾಲ್ಕು ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಧ್ಯಾಯ 7

ಕಂಪನಿಯ ಸ್ಥಾಪನೆ

ಒಂದು ಅಂಕದ ಪ್ರಶ್ನೆಗಳು

1. ಪ್ರವರ್ತಕರು ಎಂದರೆ ಯಾರು?
2. ಕಂಪನಿಯ ಪ್ರವರ್ತನೆಯಲ್ಲಿ ಪ್ರವರ್ತಕರು ಕೈಗೊಳ್ಳುವ ಯಾವುದಾದರೊಂದು ವಿಧದ ಕಾರ್ಯಸಾಧ್ಯತೆಯ ಅಧ್ಯಯನವನ್ನು ತಿಳಿಸಿ.
3. ಯಾವ ಪ್ರಕಾರದ ಕಂಪನಿಯು ಪರಿಚಯ ಪತ್ರಿಕೆಯನ್ನು ನೀಡುತ್ತದೆ?
4. ಕೂಡು ಬಂಡವಾಳ ಕಂಪನಿಯ ಪ್ರಮುಖ ದಾಖಲೆ ಯಾವುದು?
5. ಸಾರ್ವಜನಿಕ ಕಂಪನಿಯ ಮನವಿ ಪತ್ರಕ್ಕೆ ಸಹಿಮಾಡಬೇಕಾದ ಸದಸ್ಯರ ಕನಿಷ್ಠ ಸಂಖ್ಯೆ ತಿಳಿಸಿ.
6. ಖಾಸಗಿ ಕಂಪನಿಯ ಮನವಿ ಪತ್ರಕ್ಕೆ ಸಹಿಮಾಡಬೇಕಾದ ಸದಸ್ಯರ ಕನಿಷ್ಠ ಸಂಖ್ಯೆ ತಿಳಿಸಿ.
7. ಯಾವ ಪ್ರಕಾರದ ಕಂಪನಿಯ ನಿರ್ದೇಶಕರು ಅರ್ಹತಾ ಶೇರುಗಳನ್ನು ಖರೀದಿಸಬೇಕಾಗುತ್ತದೆ?
8. SEBI ಅನ್ನು ವಿಸ್ತರಿಸಿ.
9. ಖಾಸಗಿ ಕಂಪನಿಯು ಯಾವ ಹಂತದಲ್ಲಿ ತನ್ನ ವ್ಯವಹಾರವನ್ನು ಆರಂಭಿಸಬಹುದು?

ಬಹು ಆಯ್ಕೆಯ ಪ್ರಶ್ನೆಗಳು

1. ಕಂಪನಿಯು ಹೆಸರನ್ನು ಅನುಮೋದಿಸಲು ಅರ್ಜಿಯನ್ನು ಇವರಿಗೆ ಸಲ್ಲಿಸಲಾಗುತ್ತದೆ.
   (ಅ) SEBI (ಬ) ಕಂಪನಿಯ ನೋಂದಣಿ ಅಧಿಕಾರಿಗಳು
   (ಕ) ಭಾರತ ಸರ್ಕಾರ (ಡ) ಕಂಪನಿ ನೊಂದಾಯಿಸಲ್ಪಡುವ ರಾಜ್ಯದ ರಾಜ್ಯ ಸರ್ಕಾರ.

2. ಪ್ರಸ್ತಾಪಿಸಿದ ಕಂಪನಿಯ ಹೆಸರು ಅನಪೇಕ್ಷಣೀಯವೆಂದು ಈ ಸಂದರ್ಭದಲ್ಲಿ ಪರಿಗಣಿಸಲಾಗುವುದು:
   (ಅ) ಅಸ್ತಿತ್ವದಲ್ಲಿರುವ ಕಂಪನಿಯ ಹೆಸರು, ಪ್ರಸ್ತಾಪಿಸಿದ ಹೆಸರು ಎರಡೂ ಒಂದೇ ಆಗಿದ್ದರೆ,
   (ಬ) ಅಸ್ತಿತ್ವದಲ್ಲಿರುವ ಕಂಪನಿಯ ಹೆಸರು ಪ್ರಸ್ತಾಪಿಸಿದ ಹೆಸರು ಒಂದೇ ರೀತಿಯಾಗಿ ಹೋಲುವಂತಿದ್ದರೆ,

(ಕ) ಪ್ರಸ್ತಾಪಿಸಿದ ಹೆಸರಿನಲ್ಲಿ ವಿಶ್ವ ಸಂಸ್ಥೆ , ಭಾರತ ಸರ್ಕಾರ, ಇತ್ಯಾದಿಗಳ ಲಾಂಛನವಿದ್ದರೆ,
(ಡ) ಒಂದು ವೇಳೆ ಹೆಸರಿನಲ್ಲಿ ಮೇಲಿನ ಯಾವುದೇ ಅಂಶವಿದ್ದರೆ.

3. ಪರಿಚಯ ಪತ್ರಿಕೆಯನ್ನು ಈ ಕಂಪನಿ ಬಿಡುಗಡೆ ಮಾಡುತ್ತದೆ.
(ಅ) ಖಾಸಗಿ ಕಂಪನಿ (ಬ) ಸಾರ್ವಜನಿಕರಿಂದ ಬಂಡವಾಳ ಸಂಗ್ರಹಿಸುವ ಸಾರ್ವಜನಿಕ ಕಂಪನಿ
(ಕ) ಸಾರ್ವಜನಿಕ ಉದ್ಯಮ (ಡ) ಸರ್ಕಾರಿ ಕಂಪನಿ

ಎರಡು ಅಂಕಗಳ ಪ್ರಶ್ನೆಗಳು

1. ಕಂಪನಿಯ ನೋಂದಣಿಗೆ ಬೇಕಾಗುವ ಯಾವುದಾದರೂ ಎರಡು ಪ್ರಮುಖ ದಾಖಲೆಗಳನ್ನು ತಿಳಿಸಿ.
2. ಪ್ರವರ್ತಕರ ಯಾವುದಾದರೂ ಎರಡು ಕಾರ್ಯಗಳನ್ನು ತಿಳಿಸಿ.
3. ಕಂಪನಿಯ ಸ್ಥಾಪನೆಯಲ್ಲಿರುವ ಯಾವುದಾದರೂ ಎರಡು ಹಂತಗಳನ್ನು ಹೆಸರಿಸಿ.
4. ಕಂಪನಿಯ ಮನವಿ ಪತ್ರ ಎಂದರೇನು?
5. ಕಂಪನಿಯ ಮನವಿ ಪತ್ರದ ಯಾವುದಾದರೂ ಎರಡು ಕಲಮುಗಳನ್ನು ಹೆಸರಿಸಿ.
6. ಕಂಪನಿಯ ಮನವಿ ಪತ್ರದ ಹೊಣೆಗಾರಿಕೆ ಕಲಮಿನ ಅರ್ಥ ನೀಡಿ.
7. ಅರ್ಹತಾ ಶೇರುಗಳ ಅರ್ಥವನ್ನು ಕೊಡಿ.
8. ಸಂಘದ ಕಟ್ಟಳೆ ಪತ್ರ ಎಂದರೇನು?
9. ಪರಿಚಯ ಪತ್ರಿಕೆ ಎಂದರೇನು?
10. ಕನಿಷ್ಠ ವಂತಿಕೆಯ ಅರ್ಥವನ್ನು ಕೊಡಿ.

ನಾಲ್ಕು ಅಂಕಗಳ ಪ್ರಶ್ನೆಗಳು

1. ಕಂಪನಿಯ ಪ್ರವರ್ತನಾ ಹಂತದಲ್ಲಿ ಪ್ರವರ್ತಕರು ಕೈಗೊಳ್ಳುವ ಕಾರ್ಯಸಾಧ್ಯತೆಗಳ ಅಧ್ಯಯನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಕಂಪನಿಯ ಮನವಿಪತ್ರದ ಯಾವುದಾದರೂ ನಾಲ್ಕು ಕಲಮುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಕಂಪನಿಯ ಮನವಿಪತ್ರ ಮತ್ತು ಕಟ್ಟಳೆ ಪತ್ರಗಳಿಗಿರುವ ಯಾವುದಾದರೂ ನಾಲ್ಕು ವ್ಯತ್ಯಾಸಗಳನ್ನು ತಿಳಿಸಿ.
4. ಸಂಘದ ಕಟ್ಟಳೆ ಪತ್ರದ ಬಗ್ಗೆ ಟಿಪ್ಪಣಿಯನ್ನು ಬರೆಯಿರಿ.
5. ಪರಿಚಯ ಪತ್ರದ ಬಗ್ಗೆ ಟಿಪ್ಪಣಿಯನ್ನು ಬರೆಯಿರಿ.
6. ಬಂಡವಾಳ ಸಂಗ್ರಹಣೆ ಎಂದರೇನು? ಈ ಹಂತದಲ್ಲಿರುವ ಕ್ರಮಗಳನ್ನು ತಿಳಿಸಿ.

ಎಂಟು ಅಂಕಗಳ ಪ್ರಶ್ನೆಗಳು

1. ಕಂಪನಿಯ ಪ್ರವರ್ತನೆಯ ಹಂತದಲ್ಲಿ ಪ್ರವರ್ತಕರ ಕಾರ್ಯಗಳನ್ನು ವಿವರಿಸಿ.
2. ಕಂಪನಿಯ ಸ್ಥಾಪನೆಯ ಈ ಹಂತಗಳನ್ನು ವಿವರಿಸಿ: (ಅ) ಪ್ರವರ್ತನೆ (ಆ) ನೋಂದಣಿ
3. ಬಂಡವಾಳ ಸಂಗ್ರಹಣೆ ಎಂದರೇನು? ಈ ಹಂತದಲ್ಲಿ ಒಳಗೊಳ್ಳುವ ಕ್ರಮಗಳನ್ನು ವಿವರಿಸಿ.

ಅಧ್ಯಾಯ 8

ವ್ಯವಹಾರದ ಹಣಕಾಸಿನ ಮೂಲಗಳು

ಒಂದು ಅಂಕದ ಪ್ರಶ್ನೆಗಳು

17. ವ್ಯವಹಾರದ ಹಣಕಾಸು ಎಂದರೇನು?
18. ವ್ಯವಹಾರದಲ್ಲಿ ಸ್ಥಿರ ಬಂಡವಾಳ ಯಾವ ಉದ್ದೇಶಕ್ಕಾಗಿ ಅವಶ್ಯಕವಾಗಿದೆ?
19. ವ್ಯವಹಾರದಲ್ಲಿ ಕಾರ್ಯಶೀಲ ಬಂಡವಾಳ ಯಾವ ಉದ್ದೇಶಕ್ಕಾಗಿ ಅವಶ್ಯಕವಾಗಿದೆ?

20. ದೀರ್ಘಾವಧಿಯಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಮೂಲವೊಂದನ್ನು ಹೆಸರಿಸಿ.
21. ಅಲ್ಪಾವಧಿಯಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಮೂಲವೊಂದನ್ನು ಹೆಸರಿಸಿ.
22. ಮಧ್ಯಮಾವಧಿಯಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಮೂಲವೊಂದನ್ನು ಹೆಸರಿಸಿ.
23. ಮಾಲೀಕರ ನಿಧಿಗಳಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಮೂಲವೊಂದನ್ನು ಹೆಸರಿಸಿ.
24. ಎರವಲು ನಿಧಿಗಳಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಮೂಲವೊಂದನ್ನು ಹೆಸರಿಸಿ.
25. ವ್ಯವಹಾರದ ಹಣಕಾಸಿನ ಆಂತರಿಕ ಮೂಲಗಳಿಗೆ ಒಂದು ಉದಾಹರಣೆಯನ್ನು ಕೊಡಿ.
26. ವ್ಯವಹಾರದ ಹಣಕಾಸಿನ ಬಾಹ್ಯ ಮೂಲಗಳಿಗೆ ಒಂದು ಉದಾಹರಣೆಯನ್ನು ಕೊಡಿ.
27. ಯಾವ ಪ್ರಕಾರದ ಹಣಕಾಸಿನ ಮೂಲವು ಹೆಚ್ಚು ಮಿತವ್ಯಯಕಾರಿಯಾಗಿದೆ; ಆಂತರಿಕ ಮೂಲವೋ ಅಥವಾ ಬಾಹ್ಯ ಮೂಲವೋ?
28. ಫ್ಯಾಕ್ಟರಿಂಗ್‌ನ ಒಂದು ವಿಧವನ್ನು ತಿಳಿಸಿ.
29. ಫ್ಯಾಕ್ಟರ್ ಸಲ್ಲಿಸುವ ಹಣಕಾಸಿನ ಸೇವೆಯೊಂದನ್ನು ತಿಳಿಸಿ.
30. ಗುತ್ತಿಗೆಯಲ್ಲಿ ಹಣವೊದಗಿಸುವ ಕರಾರಿನಲ್ಲಿರುವ ಭಾಗೀದಾರ(ಪಾರ್ಟಿ)ನೊಬ್ಬನನ್ನು ಹೆಸರಿಸಿ.
31. ಗುತ್ತಿಗೆಯಲ್ಲಿ ಹಣವೊದಗಿಸುವ ಕರಾರಿನಲ್ಲಿ ಗುತ್ತಿಗೆ ಕೊಡುವವನು ಎಂದರೆ ಯಾರು?
32. ಗುತ್ತಿಗೆಯಲ್ಲಿ ಹಣವೊದಗಿಸುವ ಕರಾರಿನಲ್ಲಿ ಭೋಗ್ಯದಾರ/ಗುತ್ತಿಗೆದಾರ ಎಂದರೆ ಯಾರು?
33. ಯಾವ ಪ್ರಕಾರದ ಆಸ್ತಿಗೆ ಗುತ್ತಿಗೆಯಲ್ಲಿ ಹಣವೊದಗಿಸುವುದು ಹೆಚ್ಚು ಪ್ರಚಲಿತವಾಗಿದೆ?
34. ವಾಣಿಜ್ಯ ಪತ್ರಗಳ ಅವಧಿ ಎಷ್ಟು?
35. ಕಂಪನಿಗಳು ನೀಡುವ ಶೇರುಗಳ ಒಂದು ವಿಧವನ್ನು ಹೆಸರಿಸಿ.
36. ಪ್ರಾಶಸ್ತ್ಯದ ಶೇರುಗಳ ಯಾವುದಾದರೂ ಒಂದು ವಿಧವನ್ನು ತಿಳಿಸಿ.
37. ಯಾವ ಪ್ರಕಾರದ ಶೇರುದಾರರು ಕಂಪನಿಯ ನಿರ್ವಹಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರುತ್ತಾರೆ?
38. ಪ್ರಾಶಸ್ತ್ಯದ ಶೇರುದಾರರು ಹೊಂದಿರುವ ಪ್ರಾಶಸ್ತ್ಯದ ಹಕ್ಕೊಂದನ್ನು ಬರೆಯಿರಿ.
39. ಸಾಲಪತ್ರಗಳ ಯಾವುದಾದರೂ ಒಂದು ವಿಧವನ್ನು ತಿಳಿಸಿ.
40. ಭಾರತೀಯ ಕಂಪನಿಗಳು ನಿಧಿ ಸಂಗ್ರಹಿಸಬಹುದಾದ ಅಂತರರಾಷ್ಟ್ರೀಯ ಹಣಕಾಸಿನ ಯಾವುದಾದರೂ ಒಂದು ಮೂಲವನ್ನು ಹೆಸರಿಸಿ.
41. ಅಂತರರಾಷ್ಟ್ರೀಯ ಬಂಡವಾಳ ಮಾರುಕಟ್ಟೆಯಿಂದ ನಿಧಿ ಸಂಗ್ರಹಿಸಲು ಉಪಯೋಗಿಸುವ ಹಣಕಾಸಿನ ಯಾವುದಾದರೂ ಒಂದು ಸಾಧನವನ್ನು ಹೆಸರಿಸಿ.
42. IFCI ಅನ್ನು ವಿಸ್ತರಿಸಿ ಬರೆಯಿರಿ.
43. SFC ಅನ್ನು ವಿಸ್ತರಿಸಿ ಬರೆಯಿರಿ.
44. ICICI ಅನ್ನು ವಿಸ್ತರಿಸಿ ಬರೆಯಿರಿ.
45. IDBI ಅನ್ನು ವಿಸ್ತರಿಸಿ ಬರೆಯಿರಿ.
46. UTI ಅನ್ನು ವಿಸ್ತರಿಸಿ ಬರೆಯಿರಿ.
47. LIC ಅನ್ನು ವಿಸ್ತರಿಸಿ ಬರೆಯಿರಿ.
48. GDRs ಅನ್ನು ವಿಸ್ತರಿಸಿ ಬರೆಯಿರಿ.
49. ADRs ಅನ್ನು ವಿಸ್ತರಿಸಿ ಬರೆಯಿರಿ.

ಒಂದು ಅಂಕದ ಬಹು ಆಯ್ಕೆ ಪ್ರಶ್ನೆಗಳು

2. ಸಾಮಾನ್ಯ ಶೇರುದಾರರನ್ನು ಹೀಗೆಂದು ಕರೆಯುತ್ತಾರೆ.
   ಎ) ಕಂಪನಿಯ ಮಾಲೀಕರು ಬಿ) ಕಂಪನಿಯ ಪಾಲುದಾರರು
   ಸಿ) ಕಂಪನಿಯ ಅಧಿಕಾರಿಗಳು ಡಿ) ಕಂಪನಿಯ ಸಂರಕ್ಷಕರು
3. 'ವಿಮುಕ್ತಾರ್ಹ' ಎಂಬ ಪದವನ್ನು ಇದಕ್ಕೆ ಉಪಯೋಗಿಸುತ್ತಾರೆ.
   ಎ) ಪ್ರಾಶಸ್ತ್ಯದ ಶೇರುಗಳು ಬಿ) ವಾಣಿಜ್ಯ ಪತ್ರಗಳು
   ಸಿ) ಸಾಮಾನ್ಯ ಶೇರುಗಳು ಡಿ) ಸಾರ್ವಜನಿಕ ಠೇವಣಿಗಳು
4. ಸ್ಥಿರ ಆಸ್ತಿಯ ಖರೀದಿಗೆ ಬೇಕಾಗಿರುವ ಹಣಕಾಸು–ಇದಕ್ಕೆ ಉದಾಹರಣೆಯಾಗಿದೆ.

ಎ) ಸ್ಥಿರ ಬಂಡವಾಳದ ಅವಶ್ಯಕತೆ ಬಿ) ಲಾಭದ ಮರುಹೂಡಿಕೆ
ಸಿ) ಕಾರ್ಯಶೀಲ ಬಂಡವಾಳದ ಅವಶ್ಯಕತೆ ಡಿ) ಗುತ್ತಿಗೆಯಲ್ಲಿ ಹಣವೊದಗಿಸುವುದು

5. ಎ ಡಿ ಆರ್ ಗಳನ್ನು ಇಲ್ಲಿ ಬಿಡುಗಡೆ ಮಾಡುತ್ತಾರೆ.
ಎ) ಕೆನಡಾ ಬಿ) ಚೀನಾ ಸಿ) ಭಾರತ ಡಿ) ಯು ಎಸ್ ಎ

6. ಸಾರ್ವಜನಿಕ ಠೇವಣಿಯನ್ನು ಇಲ್ಲಿಂದ ನೇರವಾಗಿ ಸಂಗ್ರಹಿಸಲಾಗುತ್ತದೆ.
ಎ) ಸಾರ್ವಜನಿಕರು ಬಿ) ನಿರ್ದೇಶಕರು ಸಿ) ಲೆಕ್ಕಪರಿಶೋಧಕರು ಡಿ) ಮಾಲೀಕರು

7. ಸಾಲಪತ್ರವು ಇದನ್ನು ಪ್ರತಿನಿಧಿಸುತ್ತದೆ.
ಎ) ಕಂಪನಿಯ ಸ್ಥಿರ ಬಂಡವಾಳ ಬಿ) ಕಂಪನಿಯ ಶಾಶ್ವತ ಬಂಡವಾಳ
ಸಿ) ಕಂಪನಿಯ ಬದಲಾಗುತ್ತಿರುವ ಬಂಡವಾಳ ಡಿ) ಕಂಪನಿಯ ಸಾಲದ ನಿಧಿ

8. ವಾಣಿಜ್ಯ ಪತ್ರದ ವಾಯಿದೆ ಅವಧಿಯು ಸಾಮಾನ್ಯವಾಗಿ
ಎ) 20 ರಿಂದ 40 ದಿನಗಳು ಬಿ) 60 ರಿಂದ 90 ದಿನಗಳು
ಸಿ) 120 ರಿಂದ 365 ದಿನಗಳು ಡಿ) 90 ರಿಂದ 364 ದಿನಗಳು

9. ಆಂತರಿಕ ಬಂಡವಾಳದ ಮೂಲಗಳೆಂದರೆ,
ಎ) ಹೊರಗಿನವರಿಂದ, ಅಂದರೆ, ಪೂರೈಕೆದಾರರಿಂದ ಸಂಗ್ರಹಿಸುವುದು
ಬಿ) ವಾಣಿಜ್ಯ ಬ್ಯಾಂಕುಗಳಿಂದ ಸಾಲದ ಮೂಲಕ ಸಂಗ್ರಹಿಸುವುದು
ಸಿ) ಶೇರುಗಳ ನೀಡುವಿಕೆಯ ಮೂಲಕ ಸಂಗ್ರಹಿಸುವುದು
ಡಿ) ವ್ಯವಹಾರದ ಒಳಗಿಂದಲೇ ಸೃಷ್ಟಿಸುವುದು.

ಎರಡು ಅಂಕಗಳ ಪ್ರಶ್ನೆಗಳು

1. ವ್ಯವಹಾರದ ಹಣಕಾಸು ಎಂದರೇನು?
2. ವ್ಯವಹಾರದಲ್ಲಿ ಸ್ಥಿರ ಬಂಡವಾಳದ ಅವಶ್ಯಕತೆ ಎಂದರೇನು?
3. ವ್ಯವಹಾರದಲ್ಲಿ ಕಾರ್ಯಶೀಲ ಬಂಡವಾಳ ಅವಶ್ಯಕತೆ ಎಂದರೇನು?
4. ದೀರ್ಘಾವಧಿಯಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಯಾವುದಾದರೂ ಎರಡು ಮೂಲಗಳನ್ನು ಹೆಸರಿಸಿ.
5. ಅಲ್ಪಾವಧಿಯಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಯಾವುದಾದರೂ ಎರಡು ಮೂಲಗಳನ್ನು ಹೆಸರಿಸಿ.
6. ಮಧ್ಯಮಾವಧಿಯಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಯಾವುದಾದರೂ ಎರಡು ಮೂಲಗಳನ್ನು ಹೆಸರಿಸಿ.
7. ಮಾಲೀಕರ ನಿಧಿಗಳಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಯಾವುದಾದರೂ ಎರಡು ಮೂಲಗಳನ್ನು ಹೆಸರಿಸಿ.
8. ಎರವಲು ನಿಧಿಗಳಡಿಯಲ್ಲಿ ವರ್ಗೀಕರಿಸಲಾದ ಹಣಕಾಸಿನ ಯಾವುದಾದರೂ ಎರಡು ಮೂಲಗಳನ್ನು ಹೆಸರಿಸಿ.
9. ವ್ಯವಹಾರದ ಹಣಕಾಸಿನ ಆಂತರಿಕ ಮೂಲಗಳಿಗೆ ಯಾವುದಾದರೂ ಎರಡು ಉದಾಹರಣೆಗಳನ್ನು ಕೊಡಿ.
10. ವ್ಯವಹಾರದ ಹಣಕಾಸಿನ ಬಾಹ್ಯ ಮೂಲಗಳಿಗೆ ಯಾವುದಾದರೂ ಎರಡು ಉದಾಹರಣೆಗಳನ್ನು ಕೊಡಿ.
11. ಯಾವ ಪ್ರಕಾರದ ಹಣಕಾಸಿನ ಮೂಲವು ಹೆಚ್ಚು ಮಿತವ್ಯಯಕಾರಿಯಾಗಿದೆ; ಆಂತರಿಕ ಮೂಲವೋ ಅಥವಾ ಬಾಹ್ಯ ಮೂಲವೋ? ಮತ್ತು ಏಕೆ?
12. ಉಳಿಸಿಕೊಂಡ ಗಳಿಕೆಗಳು ಎಂದರೇನು?
13. ವ್ಯಾಪಾರೀ ಸಾಲ ಎಂದರೇನು?
14. ಫ್ಯಾಕ್ಟರಿಂಗ್ ಎಂದರೇನು?
15. ಫ್ಯಾಕ್ಟರಿಂಗ್‌ನ ಎರಡು ವಿಧಗಳನ್ನು ತಿಳಿಸಿ.
16. ಸಾಲಪತ್ರಗಳೆಂದರೇನು?
17. ಸಾಲಪತ್ರಗಳ ಎರಡು ವಿಧಗಳನ್ನು ತಿಳಿಸಿ.
18. ವಾಣಿಜ್ಯ ಬ್ಯಾಂಕುಗಳು ಒದಗಿಸುವ ಯಾವುದಾದರೂ ಎರಡು ರೀತಿಯ ಸಾಲಗಳನ್ನು ತಿಳಿಸಿ.
19. ಹಣಕಾಸಿನ ಸಂಸ್ಥೆಗಳು 'ಅಭಿವೃದ್ಧಿ ಬ್ಯಾಂಕುಗಳು' ಎಂದು ಏಕೆ ಕರೆಯಲ್ಪಡುತ್ತವೆ?
20. 'ಗುತ್ತಿಗೆಯಲ್ಲಿ ಹಣ ಒದಗಿಸುವುದು' ಎಂದರೇನು?
21. ಗುತ್ತಿಗೆ ಕರಾರಿನಲ್ಲಿರುವ ಭಾಗೀದಾರರು (ಪಾರ್ಟಿಗಳು) ಯಾರು?
22. ಸಾರ್ವಜನಿಕ ಠೇವಣಿಗಳೆಂದರೇನು?
23. ಸಾರ್ವಜನಿಕ ಠೇವಣಿಗಳು ಠೇವಣಿದಾರರಿಗೂ, ಸಂಸ್ಥೆಗಳಿಗೂ ಹೇಗೆ ಪ್ರಯೋಜನಕಾರಿಯಾಗಿವೆ?

24. ವಾಣಿಜ್ಯ ಪತ್ರಗಳೆಂದರೇನು?
25. ಶೇರುಗಳ ಅರ್ಥವನ್ನು ನೀಡಿ.
26. ಕಂಪನಿಗಳು ಸಾಮಾನ್ಯವಾಗಿ ನೀಡುವ ಶೇರುಗಳ ಪ್ರಕಾರಗಳನ್ನು ಹೆಸರಿಸಿ.
27. ಸಾಮಾನ್ಯ ಶೇರುಗಳೆಂದರೇನು?
28. ಪ್ರಾಶಸ್ತ್ಯದ ಶೇರುಗಳೆಂದರೇನು?
29. ಪ್ರಾಶಸ್ತ್ಯದ ಶೇರುಗಳ ಯಾವುದಾದರೂ ಎರಡು ವಿಧಗಳನ್ನು ತಿಳಿಸಿ.
30. ಪ್ರಾಶಸ್ತ್ಯದ ಶೇರುದಾರರು ಹೊಂದಿರುವ ಎರಡು ಪ್ರಾಶಸ್ತ್ಯದ ಹಕ್ಕುಗಳನ್ನು ತಿಳಿಸಿ.
31. ಭಾರತೀಯ ಕಂಪನಿಗಳು ಹಣಕಾಸು ಸಂಗ್ರಹಿಸಬಹುದಾದ ಅಂತರರಾಷ್ಟ್ರೀಯ ಹಣಕಾಸಿನ ಯಾವುದಾದರೂ ಎರಡು ಮೂಲಗಳನ್ನು ಹೆಸರಿಸಿ.
32. ಅಂತರರಾಷ್ಟ್ರೀಯ ಬಂಡವಾಳ ಮಾರುಕಟ್ಟೆಯಿಂದ ಹಣಕಾಸು ಸಂಗ್ರಹಿಸಲು ಉಪಯೋಗಿಸುವ ಯಾವುದಾದರೂ ಎರಡು ಹಣಕಾಸಿನ ಸಾಧನಗಳನ್ನು ಹೆಸರಿಸಿ.
33. ಜಾಗತಿಕ ನ್ಯಾಸಧಾರಿ ರಶೀದಿಗಳೆಂದರೇನು?
34. ಅಮೇರಿಕಾದ ನ್ಯಾಸಧಾರಿ ರಶೀದಿಗಳೆಂದರೇನು?
35. ವಿದೇಶೀ ಹಣ ಪರಿವರ್ತನೀಯ ಮುಚ್ಚಳಿಕೆ ಪತ್ರ ಎಂದರೇನು?
36. ಹಣಕಾಸಿನ ಮೂಲದ ಆಯ್ಕೆಯ ಮೇಲೆ ಪ್ರಭಾವ ಬೀರುವ ಯಾವುದಾದರೂ ಎರಡು ಅಂಶಗಳನ್ನು ತಿಳಿಸಿ.

ನಾಲ್ಕು ಅಂಕಗಳ ಪ್ರಶ್ನೆಗಳು

1. ವ್ಯವಹಾರದ ಹಣಕಾಸಿನ ಅವಶ್ಯಕತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಮಾಲೀಕತ್ವದ ಆಧಾರದ ಮೇಲೆ ಹಣಕಾಸನ್ನು ಸಂಗ್ರಹಿಸಬಹುದಾದ ಮೂಲಗಳನ್ನು ಪಟ್ಟಿ ಮಾಡಿ.
3. ಲಘು ಟಿಪ್ಪಣಿ ಬರೆಯಿರಿ: (ಎ) ಮಾಲೀಕರ ನಿಧಿಗಳು (ಬಿ) ಎರವಲು ನಿಧಿಗಳು
4. ಲಘು ಟಿಪ್ಪಣಿ ಬರೆಯಿರಿ: (ಎ) ಉಳಿಸಿಕೊಂಡ ಗಳಿಕೆಗಳು (ಬಿ) ವ್ಯಾಪಾರೀ ಸಾಲ
5. ಲಘು ಟಿಪ್ಪಣಿ ಬರೆಯಿರಿ: (ಎ) ಸಾರ್ವಜನಿಕ ಠೇವಣಿಗಳು (ಬಿ) ವಾಣಿಜ್ಯ ಪತ್ರಗಳು
6. ಹಣಕಾಸಿನ ಮೂಲವಾಗಿ ಉಳಿಸಿಕೊಂಡ ಗಳಿಕೆಗಳ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
7. ಹಣಕಾಸಿನ ಮೂಲವಾಗಿ ವ್ಯಾಪಾರೀ ಸಾಲದ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
8. ಹಣಕಾಸಿನ ಮೂಲವಾಗಿ ವ್ಯಾಪಾರೀ ಸಾಲದ ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
9. ಹಣಕಾಸಿನ ಮೂಲವಾಗಿ ಫ್ಯಾಕ್ಟರಿಂಗ್‌ನ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
10. ಫ್ಯಾಕ್ಟರಿಂಗ್ ಎಂದರೇನು? ಅದರ ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
11. ಹಣಕಾಸಿನ ಮೂಲವಾಗಿ ಗುತ್ತಿಗೆಯಲ್ಲಿ ಹಣವೊದಗಿಸುವುದರ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
12. ಹಣಕಾಸಿನ ಮೂಲವಾಗಿ ಗುತ್ತಿಗೆಯಲ್ಲಿ ಹಣವೊದಗಿಸುವುದರ ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
13. ಹಣಕಾಸಿನ ಮೂಲವಾಗಿ ಸಾರ್ವಜನಿಕ ಠೇವಣಿಗಳ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
14. ಹಣಕಾಸಿನ ಮೂಲವಾಗಿ ಸಾರ್ವಜನಿಕ ಠೇವಣಿಗಳ ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
15. ಹಣಕಾಸಿನ ಮೂಲವಾಗಿ ವಾಣಿಜ್ಯ ಪತ್ರಗಳ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
16. ಹಣಕಾಸಿನ ಮೂಲವಾಗಿ ವಾಣಿಜ್ಯ ಪತ್ರಗಳ ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
17. ಲಘು ಟಿಪ್ಪಣಿ ಬರೆಯಿರಿ: (ಎ) ಸಾಮಾನ್ಯ ಶೇರುಗಳು (ಬಿ) ಪ್ರಾಶಸ್ತ್ಯದ ಶೇರುಗಳು
18. ಹಣಕಾಸಿನ ಮೂಲವಾಗಿ ಸಾಮಾನ್ಯ ಶೇರುಗಳ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
19. ಹಣಕಾಸಿನ ಮೂಲವಾಗಿ ಸಾಮಾನ್ಯ ಶೇರುಗಳ ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
20. ಹಣಕಾಸಿನ ಮೂಲವಾಗಿ ಪ್ರಾಶಸ್ತ್ಯದ ಶೇರುಗಳ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
21. ಹಣಕಾಸಿನ ಮೂಲವಾಗಿ ಪ್ರಾಶಸ್ತ್ಯದ ಶೇರುಗಳ ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
22. ಹಣಕಾಸಿನ ಮೂಲವಾಗಿ ಸಾಲಪತ್ರಗಳ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
23. ಸಾಲಪತ್ರಗಳೆಂದರೇನು? ಹಣಕಾಸಿನ ಮೂಲವಾಗಿ ಸಾಲಪತ್ರಗಳ ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
24. ವಾಣಿಜ್ಯ ಬ್ಯಾಂಕುಗಳ ಮೂಲಕ ಹಣಕಾಸನ್ನು ಸಂಗ್ರಹಿಸುವುದರ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

25. ಹಣಕಾಸು ಸಂಸ್ಥೆಗಳ ಮೂಲಕ ಹಣಕಾಸನ್ನು ಸಂಗ್ರಹಿಸುವುದರ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
26. ಸಂಸ್ಥೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಣಕಾಸನ್ನು ಸಂಗ್ರಹಿಸಲು ಇರುವ ವಿವಿಧ ಮಾರ್ಗಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಎಂಟು ಅಂಕಗಳ ಪ್ರಶ್ನೆಗಳು

1. ಉಳಿಸಿಕೊಂಡ ಗಳಿಕೆಗಳು ಎಂದರೇನು? ಹಣಕಾಸಿನ ಮೂಲವಾಗಿ ಅವುಗಳ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
2. ವ್ಯಾಪಾರೀ ಸಾಲ ಎಂದರೇನು? ಹಣಕಾಸಿನ ಮೂಲವಾಗಿ ಅದರ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
3. ಹಣಕಾಸಿನ ಮೂಲವಾಗಿ ಫ್ಯಾಕ್ಟರಿಂಗ್‌ನ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
4. ಗುತ್ತಿಗೆಯಲ್ಲಿ ಹಣವೊದಗಿಸುವುದು ಎಂದರೇನು? ಹಣಕಾಸಿನ ಮೂಲವಾಗಿ ಅದರ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
5. ಸಾರ್ವಜನಿಕ ಠೇವಣಿಗಳೆಂದರೇನು? ಹಣಕಾಸಿನ ಮೂಲವಾಗಿ ಅವುಗಳ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
6. ವಾಣಿಜ್ಯ ಪತ್ರಗಳು ಎಂದರೇನು? ಹಣಕಾಸಿನ ಮೂಲವಾಗಿ ಅವುಗಳ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
7. ಹಣಕಾಸಿನ ಮೂಲವಾಗಿ ಸಾಮಾನ್ಯ ಶೇರುಗಳ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
8. ಹಣಕಾಸಿನ ಮೂಲವಾಗಿ ಪ್ರಾಶಸ್ತ್ಯದ ಶೇರುಗಳ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
9. ಹಣಕಾಸಿನ ಮೂಲವಾಗಿ ಸಾಲಪತ್ರಗಳ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
10. ಹಣಕಾಸಿನ ಮೂಲವಾಗಿ ವಾಣಿಜ್ಯ ಬ್ಯಾಂಕುಗಳ ಅನುಕೂಲಗಳು ಮತ್ತು ಮಿತಿಗಳನ್ನು ವಿವರಿಸಿ.
11. ವ್ಯವಹಾರದ ಹಣಕಾಸಿನ ಸೂಕ್ತ ಮೂಲದ ಆಯ್ಕೆಯ ಮೇಲೆ ಪ್ರಭಾವ ಬೀರುವ ಯಾವುದಾದರೂ ಎಂಟು ಅಂಶಗಳನ್ನು ವಿವರಿಸಿ.

ಅಧ್ಯಾಯ 9

ಸಣ್ಣ ವ್ಯವಹಾರ

ಒಂದು ಅಂಕದ ಪ್ರಶ್ನೆಗಳು

1. ಯಾವ ವರ್ಷದಲ್ಲಿ MSMED ಕಾಯಿದೆಯನ್ನು ಜಾರಿಗೆ ತರಲಾಯಿತು?
2. ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಪ್ರೋತ್ಸಾಹಿಸಲು ಮತ್ತು ಅಭಿವೃದ್ಧಿ ಪಡಿಸಲು ಭಾರತ ಸರ್ಕಾರವು ರಚಿಸಿರುವ ನೋಡಲ್ ಸಚಿವಾಲಯವನ್ನು ಹೆಸರಿಸಿ.
3. ಸಣ್ಣ ಪ್ರಮಾಣದ ಕ್ಷೇತ್ರದಲ್ಲಿನ ಯಾವುದಾದರೊಂದು ಪ್ರಮುಖ ಕೈಗಾರಿಕಾ ಗುಂಪನ್ನು ತಿಳಿಸಿ.
4. ಸಣ್ಣ ಮತ್ತು ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರವು ಸ್ಥಾಪಿಸಿರುವ ಯಾವುದಾದರೂ ಒಂದು ಸಂಸ್ಥೆಯನ್ನು ಹೆಸರಿಸಿ.
5. NSIC ಅನ್ನು ವಿಸ್ತರಿಸಿ.
6. SIDBI ಅನ್ನು ವಿಸ್ತರಿಸಿ.
7. RWED ಅನ್ನು ವಿಸ್ತರಿಸಿ.
8. WASME ಅನ್ನು ವಿಸ್ತರಿಸಿ.
9. DIC ಅನ್ನು ವಿಸ್ತರಿಸಿ.
10. ಉತ್ಪಾದನಾ ವಿಭಾಗದಲ್ಲಿ ಸೂಕ್ಷ್ಮ ಉದ್ದಿಮೆಗಳಿಗೆ ನಿಗದಿಪಡಿಸಿರುವ ಹೂಡಿಕೆಯ ಮಿತಿಯನ್ನು ತಿಳಿಸಿ.
11. ಸೇವಾ ವಿಭಾಗದಲ್ಲಿ ಸೂಕ್ಷ್ಮ ಉದ್ದಿಮೆಗಳಿಗೆ ನಿಗದಿಪಡಿಸಿರುವ ಹೂಡಿಕೆಯ ಮಿತಿಯನ್ನು ತಿಳಿಸಿ.

12. ಉತ್ಪಾದನಾ ವಿಭಾಗದಲ್ಲಿ ಸಣ್ಣ ಉದ್ದಿಮೆಗಳಿಗೆ ನಿಗದಿಪಡಿಸಿರುವ ಹೂಡಿಕೆಯ ಮಿತಿಯನ್ನು ತಿಳಿಸಿ.
13. ಸೇವಾ ವಿಭಾಗದಲ್ಲಿ ಸಣ್ಣ ಉದ್ದಿಮೆಗಳಿಗೆ ನಿಗದಿಪಡಿಸಿರುವ ಹೂಡಿಕೆಯ ಮಿತಿಯನ್ನು ತಿಳಿಸಿ.
14. ಸೇವಾ ವಿಭಾಗದಲ್ಲಿ ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ನಿಗದಿಪಡಿಸಿರುವ ಹೂಡಿಕೆಯ ಮಿತಿಯನ್ನು ತಿಳಿಸಿ.
15. ಉತ್ಪಾದನಾ ವಿಭಾಗದಲ್ಲಿ ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ನಿಗದಿಪಡಿಸಿರುವ ಹೂಡಿಕೆಯ ಮಿತಿಯನ್ನು ತಿಳಿಸಿ.
16. ತೆರಿಗೆ ರಜೆ ಎಂದರೇನು?

ಒಂದು ಅಂಕದ ಬಹು ಆಯ್ಕೆ ಪ್ರಶ್ನೆಗಳು

1. ಈ ಕೆಳಗಿನವುಗಳಲ್ಲಿ ಯಾವುದು ಗುಡಿ ಕೈಗಾರಿಕೆಗಳ ಲಕ್ಷಣವಲ್ಲ.
   (ಎ) ಸರಳ ಉಪಕರಣಗಳ ಬಳಕೆ
   (ಬಿ) ಕಡಿಮೆ ಬಂಡವಾಳ ಹೂಡಿಕೆ
   (ಸಿ) ಏಕವ್ಯಕ್ತಿಗಳು ಖಾಸಗಿ ಸಂಪನ್ಮೂಲಗಳನ್ನು ಬಳಸುವುದು
   (ಡಿ) ಆಮದು ಮಾಡಿಕೊಂಡ ತಂತ್ರಜ್ಞಾನ ಬಳಸಿ ಸರಕುಗಳ ಉತ್ಪಾದನೆ
2. ಈ ಕೆಳಗಿನ ಕೈಗಾರಿಕಾ ಗುಂಪುಗಳಲ್ಲಿ ಯಾವುದು ಸಣ್ಣ ಪ್ರಮಾಣದ ಉದ್ದಿಮೆಗಳ ವ್ಯಾಪ್ತಿಯಲ್ಲಿ ಬರುವುದಿಲ್ಲ.
   (ಎ) ಆಹಾರ ಉತ್ಪನ್ನಗಳು (ಬಿ) ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳು
   (ಸಿ) ದುರಸ್ತಿ ಸೇವೆಗಳು (ಡಿ) ಕಬ್ಬಿಣದ ಅದಿರನ್ನು ಹೊರ ತೆಗೆಯುವುದು
3. ಸಣ್ಣ ವ್ಯವಹಾರಗಳಲ್ಲಿ 'ಕಾರ್ಯ ನಿರ್ವಹಣೆ ಮತ್ತು ಉದ್ದರಿ ಮಾಪನ'ವೆಂಬ ಹೊಸ ಯೋಜನೆಯನ್ನು ಇದರ ಮೂಲಕ ಜಾರಿಗೊಳಿಸಲಾಗಿದೆ.
   (ಎ) NSIC (ಬಿ) NABARD (ಸಿ) RSBDC (ಡಿ) ಇವುಗಳಲ್ಲಿ ಯಾವುದೂ ಅಲ್ಲ

ಎರಡು ಅಂಕಗಳ ಪ್ರಶ್ನೆಗಳು

1. ಸಣ್ಣ ಕೈಗಾರಿಕೆಗಳು ಮತ್ತು ವ್ಯವಹಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವ್ಯವಹಾರದ ಗಾತ್ರವನ್ನು ಅಳೆಯಲು ಬಳಸುವ ಯಾವುದಾದರೂ ಎರಡು ಮಾನದಂಡಗಳನ್ನು ತಿಳಿಸಿ.
2. ಗ್ರಾಮ ಕೈಗಾರಿಕೆಗಳ ಅರ್ಥವನ್ನು ಕೊಡಿ.
3. ಗುಡಿ ಕೈಗಾರಿಕೆಗಳ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.
4. ಸಣ್ಣ ಮತ್ತು ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಯಾವುದಾದರೂ ಎರಡು ಸಂಸ್ಥೆಗಳನ್ನು ತಿಳಿಸಿ.
5. NSIC ಮುಖಾಂತರ ಸಣ್ಣ ಕೈಗಾರಿಕಾ ಘಟಕಗಳ 'ಕಾರ್ಯನಿರ್ವಹಣೆ ಮತ್ತು ಉದ್ದರಿ ಮಾಪನ' ಯೋಜನೆಯ ಅವಳಿ ಉದ್ದೇಶಗಳನ್ನು ತಿಳಿಸಿ.
6. ಅಸಂಘಟಿತ ಕ್ಷೇತ್ರದ ಉದ್ದಿಮೆಗಳ ರಾಷ್ಟ್ರೀಯ ಆಯೋಗ(NCEUS)ದ ಸ್ಥಾಪನೆಯ ಎರಡು ಉದ್ದೇಶಗಳನ್ನು ತಿಳಿಸಿ.
7. ಗ್ರಾಮೀಣ ಮತ್ತು ಮಹಿಳೆಯರ ವಾಣಿಜ್ಯೋದ್ಯಮ ಅಭಿವೃದ್ಧಿ ಕಾರ್ಯಕ್ರಮವು ನೀಡುವ ಯಾವುದಾದರೂ ಎರಡು ಸೇವೆಗಳನ್ನು ತಿಳಿಸಿ.

ನಾಲ್ಕು ಅಂಕಗಳ ಪ್ರಶ್ನೆಗಳು

1. ಗುಡಿ ಕೈಗಾರಿಕೆಗಳ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಸಣ್ಣ ಪ್ರಮಾಣದ ಕ್ಷೇತ್ರದಲ್ಲಿರುವ ಯಾವುದಾದರೂ ಎಂಟು ಪ್ರಮುಖ ಕೈಗಾರಿಕಾ ಗುಂಪುಗಳನ್ನು ತಿಳಿಸಿ.
3. ಭಾರತದಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರವನ್ನು ಎತ್ತಿ ಹಿಡಿಯುವ ಯಾವುದಾದರೂ ನಾಲ್ಕು ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
4. ಸಣ್ಣ ಪ್ರಮಾಣದ ವ್ಯವಹಾರಗಳು ಎದುರಿಸುವ ಯಾವುದಾದರೂ ನಾಲ್ಕು ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5. ಸಣ್ಣ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಯಾವುದಾದರೂ ನಾಲ್ಕು ಸಂಸ್ಥೆಗಳು ನೀಡುತ್ತಿರುವ ಬೆಂಬಲವನ್ನು ಸಂಕ್ಷಿಪ್ತವಾಗಿ ವಿವರಿಸಿ.

6. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಮಾರಾಟ ಪ್ರಕ್ರಿಯೆ ಬೆಂಬಲ ಯೋಜನೆಯಡಿಯಲ್ಲಿ ನೀಡಲಾಗುವ ಯಾವುದಾದರೂ ನಾಲ್ಕು ಮಾರಾಟ ಪ್ರಕ್ರಿಯಾ ಬೆಂಬಲ ಚಟುವಟಿಕೆಗಳನ್ನು ತಿಳಿಸಿ.
7. ಹಿಂದುಳಿದ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಆಕರ್ಷಿಸಲು ಸರ್ಕಾರದಿಂದ ನೀಡಲಾಗುವ ಯಾವುದಾದರೂ ನಾಲ್ಕು ಉತ್ತೇಜನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಧ್ಯಾಯ 10

ಆಂತರಿಕ ವ್ಯಾಪಾರ

ಒಂದು ಅಂಕದ ಪ್ರಶ್ನೆಗಳು

1. ಆಂತರಿಕ ವ್ಯಾಪಾರ ಎಂದರೇನು?
2. ಆಂತರಿಕ ವ್ಯಾಪಾರದ ಎರಡು ವಿಧಗಳನ್ನು ತಿಳಿಸಿ.
3. ಸಗಟು ವ್ಯಾಪಾರ ಎಂದರೇನು?
4. ಚಿಲ್ಲರೆ ವ್ಯಾಪಾರ ಎಂದರೇನು?
5. ಯಾವ ವಿಧದ ವ್ಯಾಪಾರಿಗಳು ಸಗಟುವ್ಯಾಪಾರಿಗಳು ಹಾಗೂ ಗ್ರಾಹಕರ ನಡುವೆ ಸಂಪರ್ಕದ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಾರೆ?
6. ಯಾವ ವಿಧದ ವ್ಯಾಪಾರಿಗಳು ಉತ್ಪಾದಕರು ಹಾಗೂ ಚಿಲ್ಲರೆ ವ್ಯಾಪಾರಿಗಳ ನಡುವೆ ಸಂಪರ್ಕದ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಾರೆ?
7. ಸಗಟು ವ್ಯಾಪಾರಿ ಮತ್ತು ಚಿಲ್ಲರೆ ವ್ಯಾಪಾರಿಗಳ ನಡುವೆ ಇರುವ ಯಾವುದಾದರೊಂದು ವ್ಯತ್ಯಾಸ ತಿಳಿಸಿ.
8. ಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುವ ಸಂಚಾರಿ ಚಿಲ್ಲರೆ ವ್ಯಾಪಾರಿಯ ಯಾವುದಾದರೊಂದು ಪ್ರಕಾರವನ್ನು ತಿಳಿಸಿ.
9. ನಿರ್ದಿಷ್ಟ ದಿನಗಳು ಅಥವಾ ದಿನಾಂಕಗಳಂದು ತಮ್ಮ ಅಂಗಡಿಗಳನ್ನು ವಿವಿಧ ಸ್ಥಳಗಳಲ್ಲಿ ತೆರೆಯುವ ಸಂಚಾರಿ ಚಿಲ್ಲರೆ ವ್ಯಾಪಾರಿಗಳ ಪ್ರಕಾರವನ್ನು ತಿಳಿಸಿ.
10. ಬೀದಿ ವ್ಯಾಪಾರಿಗಳನ್ನು ಸಾಮಾನ್ಯವಾಗಿ ಊರಿನ ಯಾವ ಭಾಗದಲ್ಲಿ ನೋಡುತ್ತೀರಿ?
11. ಅಗ್ಗದ ವ್ಯಾಪಾರಿಗಳು ಯಾವ ಪ್ರಕಾರದ ಸೇವೆಗಳನ್ನು ನೀಡುತ್ತಾರೆ?
12. ವೈಶಿಷ್ಟ್ಯತೆಯ ಅಂಗಡಿಗಳಲ್ಲಿ ಯಾವ ಬಗೆಯ ಸರಕುಗಳನ್ನು ಮಾರಲಾಗುತ್ತದೆ?
13. ಉಪಯೋಗಿಸಿದ ವಸ್ತುಗಳು, ಪುಸ್ತಕಗಳು, ಪುರಾತನ ವಸ್ತು, ಇತ್ಯಾದಿಗಳನ್ನು ಯಾವ ಪ್ರಕಾರದ ಸ್ಥಿರ ಅಂಗಡಿ ಸಣ್ಣ ಚಿಲ್ಲರೆ ವ್ಯಾಪಾರಿಗಳು ಮಾರುತ್ತಾರೆ?
14. 'ಸೂಜಿಯಿಂದ ಹಿಡಿದು ವಿಮಾನದವರೆಗೆ ಕೊಂಡೊಯ್ಯಿರಿ' ಎಂಬ ಹೇಳಿಕೆ ಯಾವ ಪ್ರಕಾರದ ಸ್ಥಿರ ಅಂಗಡಿ–ದೊಡ್ಡ ಚಿಲ್ಲರೆ ಅಂಗಡಿಗೆ ಅನ್ವಯವಾಗುತ್ತದೆ?
15. ಬಹುಶಾಖಾ ಅಂಗಡಿಗಳಿಗೆ ಒಂದು ಉದಾಹರಣೆಯನ್ನು ಕೊಡಿ.
16. AVM ಅನ್ನು ವಿಸ್ತರಿಸಿ ಬರೆಯಿರಿ.
17. ಬ್ಯಾಂಕಿಂಗ್ ಸೇವೆಯಲ್ಲಿ ಸಾಮಾನ್ಯವಾಗಿ ಕಾಣುವ ಸ್ವಯಂಚಾಲಿತ ಮಾರಾಟ ಯಂತ್ರ ಯಾವುದು?
18. ASSOCHAM ಅನ್ನು ವಿಸ್ತರಿಸಿ ಬರೆಯಿರಿ.

ಒಂದು ಅಂಕದ ಬಹು ಆಯ್ಕೆ ಪ್ರಶ್ನೆಗಳು

1. ಈ ಕೆಳಗಿನವುಗಳಲ್ಲಿ ಯಾವ ಬಗೆಯ ವ್ಯಾಪಾರಿಗಳು ಸಂಚಾರಿ ಚಿಲ್ಲರೆ ವ್ಯಾಪಾರಿಗಳ ವರ್ಗದಲ್ಲಿ ಬರುವುದಿಲ್ಲ?
   (ಎ) ತಿರುಗು ವ್ಯಾಪಾರಿಗಳು ಮತ್ತು ಹೊತ್ತು ಮಾರುವವರು
   (ಬಿ) ಮಾರುಕಟ್ಟೆ ವ್ಯಾಪಾರಿಗಳು
   (ಸಿ) ಅಗ್ಗದ ವ್ಯಾಪಾರಿಗಳು
   (ಡಿ) ಬೀದಿ ಮಳಿಗೆ ವ್ಯಾಪಾರಿಗಳು
2. ಈ ಕೆಳಗಿನವುಗಳಲ್ಲಿ ಯಾರು ಸ್ಥಿರ ಅಂಗಡಿ ದೊಡ್ಡ ಚಿಲ್ಲರೆ ವ್ಯಾಪಾರಿಯಲ್ಲ?
   (ಎ) ಸಾಮಾನ್ಯ ಮಳಿಗೆಗಳು (ಬಿ) ಸರಪಳಿ ಅಂಗಡಿಗಳು
   (ಸಿ) ಅಂಚೆ ಆದೇಶದ ಗೃಹಗಳು (ಡಿ) ಶೃಂಗ ಮಾರುಕಟ್ಟೆಗಳು
3. ಅಂಚೆ ಆದೇಶದ ಗೃಹಗಳಿಗೆ ಸೂಕ್ತವಲ್ಲದ ಸರಕುಗಳೆಂದರೆ,
   (ಎ) ವರ್ಗೀಕರಣ ಮತ್ತು ಶಿಷ್ಟೀಕರಣಕ್ಕೆ ಒಳಪಡುವ ಸರಕುಗಳು
   (ಬಿ) ಕಡಿಮೆ ಸಾಗಾಟ ವೆಚ್ಚದಲ್ಲಿ ಸಾಗಿಸಬಲ್ಲ ಸರಕುಗಳು
   (ಸಿ) ಮಾರುಕಟ್ಟೆಯಲ್ಲಿ ನಿರಂತರ ಬೇಡಿಕೆ ಇರುವ ಸರಕುಗಳು
   (ಡಿ) ಬೇಗ ಹಾಳಾಗುವ ಮತ್ತು ಭಾರವಾದ ಸರಕುಗಳು
4. ಈ ಕೆಳಗಿನ ಯಾವ ಹೇಳಿಕೆಯು ಸಗಟು ವ್ಯಾಪಾರಿಗೆ ಅನ್ವಯಿಸುವುದಿಲ್ಲ?
   (ಎ) ಉತ್ಪಾದಕರಿಂದ ದೊಡ್ಡ ಪ್ರಮಾಣದಲ್ಲಿ ಖರೀದಿಸಿ, ತುಲನಾತ್ಮಕವಾಗಿ ಸಣ್ಣ ಪ್ರಮಾಣದಲ್ಲಿ ಮಾರುತ್ತಾನೆ
   (ಬಿ) ತಮ್ಮ ಹೆಸರಿನಲ್ಲಿ ಖರೀದಿ ಮತ್ತು ಮಾರಾಟ ಕೈಗೊಳ್ಳುತ್ತಾನೆ
   (ಸಿ) ವಿವಿಧ ನಷ್ಟಭಯಗಳನ್ನು ಧಾರಣೆ ಮಾಡುತ್ತಾನೆ
   (ಡಿ) ಉತ್ಪಾದಕರು ಮತ್ತು ಗ್ರಾಹಕರ ನಡುವೆ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಾನೆ.

ಎರಡು ಅಂಕಗಳ ಪ್ರಶ್ನೆಗಳು

1. ಸಗಟು ವ್ಯಾಪಾರಿಗಳು ಬೃಹತ್ ಪ್ರಮಾಣದ ಉತ್ಪಾದನೆಗೆ ಹೇಗೆ ನೆರವಾಗುತ್ತಾರೆ?
2. ಚಿಲ್ಲರೆ ವ್ಯಾಪಾರಿಗಳು ಮಾರುಕಟ್ಟೆ ಮಾಹಿತಿ ಸಂಗ್ರಹಿಸುವುದರಲ್ಲಿ ಉತ್ಪಾದಕರು ಮತ್ತು ಸಗಟು ವ್ಯಾಪಾರಿಗಳಿಗೆ ಹೇಗೆ ಸಹಾಯ ಮಾಡುತ್ತಾರೆ?
3. ಭಾರತದಲ್ಲಿ ಸಾಮಾನ್ಯವಾಗಿ ಕಂಡು ಬರುವ ಯಾವುದಾದರೂ ಎರಡು ಪ್ರಕಾರಗಳ ಸಂಚಾರಿ ಚಿಲ್ಲರೆ ವ್ಯಾಪಾರಿಗಳನ್ನು ತಿಳಿಸಿ.
4. ಯಾವುದಾದರೂ ಎರಡು ವಿಧದ ಸ್ಥಿರ ಅಂಗಡಿ–ಸಣ್ಣ ಚಿಲ್ಲರೆ ವ್ಯಾಪಾರಿಗಳನ್ನು ತಿಳಿಸಿ.
5. ಯಾವುದಾದರೂ ಎರಡು ವಿಧದ ಸ್ಥಿರ ಅಂಗಡಿ–ದೊಡ್ಡ ಚಿಲ್ಲರೆ ವ್ಯಾಪಾರಿಗಳನ್ನು ತಿಳಿಸಿ.
6. ವೈಶಿಷ್ಟ್ಯತೆಯ ಅಂಗಡಿಗಳ ಅರ್ಥವನ್ನು ಕೊಡಿ.
7. ಉಪಯೋಗಿಸಿದ ವಸ್ತುಗಳ ಅಂಗಡಿಗಳ ಅರ್ಥವನ್ನು ಕೊಡಿ.
8. ಇಲಾಖಾ ಮಳಿಗೆಗಳು ಎಂದರೇನು?
9. ಸರಪಳಿ ಮಳಿಗೆಗಳು/ಬಹುಶಾಖಾ ಅಂಗಡಿಗಳ ಅರ್ಥವನ್ನು ಕೊಡಿ.
10. ಅಂಚೆ ಆದೇಶ ಗೃಹಗಳು ಹೇಗೆ ಚಿಲ್ಲರೆ ವ್ಯಾಪಾರ ನಡೆಸುತ್ತವೆ?
11. ಅಂಚೆ ಆದೇಶ ವ್ಯವಹಾರದಲ್ಲಿ ಹಣ ಪಾವತಿಸಲು ಗ್ರಾಹಕರಿಗಿರುವ ಯಾವುದಾದರೂ ಎರಡು ಪರ್ಯಾಯ ವಿಧಾನಗಳನ್ನು ತಿಳಿಸಿ.
12. ಗ್ರಾಹಕರ ಸಹಕಾರ ಮಳಿಗೆಗಳ ಅರ್ಥವನ್ನು ಕೊಡಿ.
13. ಗ್ರಾಹಕ ಸಹಕಾರ ಮಳಿಗೆಗಳನ್ನು ಹೇಗೆ ಸ್ಥಾಪಿಸಬಹುದು?
14. ಶೃಂಗ ಮಾರುಕಟ್ಟೆಗಳ ಅರ್ಥವನ್ನು ಕೊಡಿ.
15. ಮಾರಾಟ ಯಂತ್ರಗಳ ಅರ್ಥವನ್ನು ಕೊಡಿ.
16. ಸ್ವಯಂಚಾಲಿತ ಮಾರಾಟಯಂತ್ರಗಳ ಮೂಲಕ ಮಾರಲು ಸೂಕ್ತವಾದ ಯಾವುದಾದರೂ ಎರಡು ವಸ್ತುಗಳನ್ನು ತಿಳಿಸಿ.

ನಾಲ್ಕು ಅಂಕಗಳ ಪ್ರಶ್ನೆಗಳು

1. ಸಗಟು ವ್ಯಾಪಾರಿಗಳು ಉತ್ಪಾದಕರಿಗೆ ಸಲ್ಲಿಸುವ ಯಾವುದಾದರೂ ನಾಲ್ಕು ಸೇವೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಸಗಟು ವ್ಯಾಪಾರಿಗಳು ಚಿಲ್ಲರೆ ವ್ಯಾಪಾರಿಗಳಿಗೆ ಸಲ್ಲಿಸುವ ಯಾವುದಾದರೂ ನಾಲ್ಕು ಸೇವೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
3. ಚಿಲ್ಲರೆ ವ್ಯಾಪಾರಿಗಳು ಉತ್ಪಾದಕರಿಗೆ ಮತ್ತು ಸಗಟು ವ್ಯಾಪಾರಿಗಳಿಗೆ ಸಲ್ಲಿಸುವ ಯಾವುದಾದರೂ ನಾಲ್ಕು ಸೇವೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
4. ಚಿಲ್ಲರೆ ವ್ಯಾಪಾರಿಗಳು ಗ್ರಾಹಕರಿಗೆ ಸಲ್ಲಿಸುವ ಯಾವುದಾದರೂ ನಾಲ್ಕು ಸೇವೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
5. ಸಂಚಾರಿ ಚಿಲ್ಲರೆ ವ್ಯಾಪಾರಿಗಳ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
6. ಸಂಚಾರಿ ಚಿಲ್ಲರೆ ವ್ಯಾಪಾರಿಗಳ ವಿವಿಧ ಪ್ರಕಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
7. ಸ್ಥಿರ ಅಂಗಡಿ ಸಣ್ಣ ವ್ಯಾಪಾರಿಗಳ ವಿವಿಧ ಪ್ರಕಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
8. ಇಲಾಖಾ ಮಳಿಗೆಗಳ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
9. ಇಲಾಖಾ ಮಳಿಗೆಗಳ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
10. ಇಲಾಖಾ ಮಳಿಗೆಗಳ ಯಾವುದಾದರೂ ನಾಲ್ಕು ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
11. ಬಹುಶಾಖಾ ಮಳಿಗೆಗಳ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
12. ಇಲಾಖಾ ಮಳಿಗೆಗಳು ಮತ್ತು ಬಹುಶಾಖಾ ಮಳಿಗೆಗಳಿಗಿರುವ ಯಾವುದಾದರೂ ನಾಲ್ಕು ವ್ಯತ್ಯಾಸಗಳನ್ನು ತಿಳಿಸಿ.
13. ಬಹುಶಾಖಾ ಮಳಿಗೆಗಳ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
14. ಬಹುಶಾಖಾ ಮಳಿಗೆಗಳ ಯಾವುದಾದರೂ ನಾಲ್ಕು ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
15. ಅಂಚೆ ಆದೇಶ ಗೃಹಗಳು ಎಲ್ಲಾ ವಿಧವಾದ ವಸ್ತುಗಳಿಗೆ ಸೂಕ್ತವಾಗಿಲ್ಲ. ಅಂಚೆ ಆದೇಶ ಗೃಹಗಳಿಗೆ ಸೂಕ್ತವಾದ ವಸ್ತುಗಳ ವಿಧಗಳನ್ನು ತಿಳಿಸಿ.
16. ಅಂಚೆ ಆದೇಶ ಗೃಹಗಳ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
17. ಅಂಚೆ ಆದೇಶ ಗೃಹಗಳ ಯಾವುದಾದರೂ ನಾಲ್ಕು ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
18. ಗ್ರಾಹಕರ ಸಹಕಾರಿ ಮಳಿಗೆಗಳ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
19. ಗ್ರಾಹಕರ ಸಹಕಾರಿ ಮಳಿಗೆಗಳ ಯಾವುದಾದರೂ ನಾಲ್ಕು ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
20. ಶೃಂಗ ಮಾರುಕಟ್ಟೆಗಳ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
21. ಶೃಂಗ ಮಾರುಕಟ್ಟೆಗಳ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
22. ಶೃಂಗ ಮಾರುಕಟ್ಟೆಗಳ ಯಾವುದಾದರೂ ನಾಲ್ಕು ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
23. ಮಾರಾಟ ಯಂತ್ರಗಳ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

ಎಂಟು ಅಂಕಗಳ ಪ್ರಶ್ನೆಗಳು

1. ಸಗಟು ವ್ಯಾಪಾರಿ ಎಂದರೆ ಯಾರು? ಉತ್ಪಾದಕರಿಗೆ ಸಗಟು ವ್ಯಾಪಾರಿಗಳ ಸೇವೆಗಳನ್ನು ವಿವರಿಸಿ.
2. ಚಿಲ್ಲರೆ ವ್ಯಾಪಾರ ಎಂದರೇನು? ಗ್ರಾಹಕರಿಗೆ ಚಿಲ್ಲರೆ ವ್ಯಾಪಾರಿಗಳ ಸೇವೆಗಳನ್ನು ವಿವರಿಸಿ.
3. ಸ್ಥಿರ ಅಂಗಡಿ ಸಣ್ಣ ಚಿಲ್ಲರೆ ವ್ಯಾಪಾರಿಗಳ ವಿವಿಧ ಪ್ರಕಾರಗಳನ್ನು ವಿವರಿಸಿ.
4. ಇಲಾಖಾ ಮಳಿಗೆಗಳ ನಾಲ್ಕು ಅನುಕೂಲತೆಗಳು ಮತ್ತು ನಾಲ್ಕು ಮಿತಿಗಳನ್ನು ವಿವರಿಸಿ.
5. ಬಹುಶಾಖಾ ಮಳಿಗೆಗಳ ನಾಲ್ಕು ಅನುಕೂಲತೆಗಳು ಮತ್ತು ನಾಲ್ಕು ಮಿತಿಗಳನ್ನು ವಿವರಿಸಿ.
6. ಅಂಚೆ ಆದೇಶ ಗೃಹಗಳ ನಾಲ್ಕು ಅನುಕೂಲತೆಗಳು ಮತ್ತು ನಾಲ್ಕು ಮಿತಿಗಳನ್ನು ವಿವರಿಸಿ.
7. ಶೃಂಗ ಮಳಿಗೆಗಳ ನಾಲ್ಕು ಅನುಕೂಲತೆಗಳು ಮತ್ತು ನಾಲ್ಕು ಮಿತಿಗಳನ್ನು ವಿವರಿಸಿ.
8. ಆಂತರಿಕ ವ್ಯಾಪಾರದ ಅಭಿವೃದ್ಧಿಯಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳ ಪಾತ್ರವನ್ನು ವಿವರಿಸಿ.

ಅಧ್ಯಾಯ 11

ಅಂತರರಾಷ್ಟ್ರೀಯ ವ್ಯವಹಾರ – 1

ಒಂದು ಅಂಕದ ಪ್ರಶ್ನೆಗಳು

1. ಸೇವೆಗಳಲ್ಲಿ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಒಂದು ಉದಾಹರಣೆಯನ್ನು ಕೊಡಿ.
2. ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಪ್ರವೇಶಿಸುವ ಒಂದು ಕ್ರಮವನ್ನು ತಿಳಿಸಿ.
3. ರಫ್ತು ವ್ಯಾಪಾರ ಎಂದರೇನು?
4. ಆಮದು ವ್ಯಾಪಾರ ಎಂದರೇನು?
5. ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಪ್ರವೇಶ ಪಡೆಯಬಹುದಾದ ಅತಿ ಸುಲಭದ ಕ್ರಮ ಯಾವುದು?
6. ಲೈಸೆನ್ಸಿಂಗ್ ಪದ್ಧತಿಯ ಮೂಲಕ ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಪ್ರವೇಶಿಸಿದ ವ್ಯವಹಾರ ಸಂಸ್ಥೆಯೊಂದರ ಉದಾಹರಣೆ ಕೊಡಿ.
7. ಫ್ರಾಂಚೈಸಿಂಗ್ ಪದ್ಧತಿಯ ಮೂಲಕ ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಪ್ರವೇಶಿಸಿದ ವ್ಯವಹಾರ ಸಂಸ್ಥೆಯೊಂದರ ಉದಾಹರಣೆ ಕೊಡಿ.
8. ಗುತ್ತಿಗೆ ಉತ್ಪಾದನೆಯು ಏನೆಂದು ಹೆಸರುವಾಸಿಯಾಗಿದೆ?
9. ವಿದೇಶೀ ಹೂಡಿಕೆಯ ಒಂದು ಪ್ರಕಾರವನ್ನು ತಿಳಿಸಿ.
10. ಲೈಸೆನ್ಸಿಂಗ್ ವ್ಯವಸ್ಥೆಯಲ್ಲಿರುವ ಭಾಗೀದಾರ(ಪಾರ್ಟಿ)ರನ್ನು ಹೆಸರಿಸಿ.
11. ಫ್ರಾಂಚೈಸಿಂಗ್ ವ್ಯವಸ್ಥೆಯಲ್ಲಿರುವ ಭಾಗೀದಾರ(ಪಾರ್ಟಿ)ರನ್ನು ಹೆಸರಿಸಿ.
12. ಪೂರ್ಣ ಮಾಲೀಕತ್ವದ ಸಹಾಯಕ ಕಂಪನಿಗಳು ಅಂತರರಾಷ್ಟ್ರೀಯ ವ್ಯವಹಾರವನ್ನು ಪ್ರವೇಶಿಸುವ ಯಾವುದಾದರೊಂದು ವಿಧಾನವನ್ನು ತಿಳಿಸಿ.

ಬಹು ಆಯ್ಕೆ ಪ್ರಶ್ನೆಗಳು

1. ಈ ಕೆಳಕಂಡ ಯಾವ ಪ್ರವೇಶ ಕ್ರಮದಲ್ಲಿ ದೇಶೀಯ ಉತ್ಪಾದಕರು, ವಿದೇಶೀ ಉತ್ಪಾದಕರಿಗೆ ನಿರ್ದಿಷ್ಟ ಶುಲ್ಕಕ್ಕೆ ಭೌದ್ಧಿಕ ಆಸ್ತಿಗಳಾದ ಸ್ವಾಮ್ಯಸನ್ನದು ಮತ್ತು ವ್ಯಾಪಾರ ಚಿಹ್ನೆಗಳನ್ನು ಉಪಯೋಗಿಸಲು ಹಕ್ಕು ನೀಡುತ್ತಾರೆ?
(ಎ) ಪರವಾನಗಿ ನೀಡಿಕೆ (ಬಿ) ಗುತ್ತಿಗೆ/ಒಪ್ಪಂದ ಉತ್ಪಾದನೆ
(ಸಿ) ಜಂಟಿ ಉದ್ದಿಮೆ (ಡಿ) ಯಾವುದೂ ಅಲ್ಲ

2. ಭಾಗಶಃ ಅಥವಾ ಪೂರ್ಣ ಉತ್ಪಾದನೆಯನ್ನು ಹೊರಗುತ್ತಿಗೆ ಕೊಡುವುದು ಮತ್ತು ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಮಾರಾಟ ಪ್ರಕ್ರಿಯಾ ಚಟುವಟಿಕೆಗಳ ಮೇಲೆ ಕೇಂದ್ರೀಕರಿಸುವುದನ್ನು ಹೀಗೆ ಕರೆಯುತ್ತಾರೆ.
(ಎ) ಪರವಾನಗಿ ನೀಡಿಕೆ (ಬಿ) ವಿಶೇಷಾಧಿಕಾರ ನೀಡಿಕೆ
(ಸಿ) ಒಪ್ಪಂದ/ಗುತ್ತಿಗೆ ಉತ್ಪಾದನೆ (ಡಿ) ಜಂಟಿ ಉದ್ದಿಮೆ

3. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸಂಸ್ಥೆಗಳು ಸೇರಿ, ಮಾತೃ ಸಂಸ್ಥೆಗಳಿಂದ ಕಾನೂನುಬದ್ಧವಾಗಿ ಪ್ರತ್ಯೇಕವಾಗಿರುವ ಮತ್ತು ಭಿನ್ನವಾಗಿರುವಂತೆ ರಚಿಸುವ ಹೊಸ ವ್ಯವಹಾರ ಸಂಸ್ಥೆಯನ್ನು ಹೀಗೆ ಕರೆಯುತ್ತಾರೆ.
(ಎ) ಒಪ್ಪಂದ ಉತ್ಪಾದನೆ (ಬಿ) ವಿಶೇಷಾಧಿಕಾರ ನೀಡಿಕೆ
(ಸಿ) ಜಂಟಿ ಉದ್ದಿಮೆಗಳು (ಡಿ) ಪರವಾನಗಿ ನೀಡಿಕೆ

4. ಈ ಕೆಳಕಂಡ ಅಂಶಗಳಲ್ಲಿ ಯಾವುದು ರಫ್ತು ಮಾಡುವಿಕೆಯ ಅನುಕೂಲವಲ್ಲ?
(ಎ) ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಪ್ರವೇಶಿಸುವ ಸುಲಭ ವಿಧಾನ
(ಬಿ) ತುಲನಾತ್ಮಕವಾಗಿ ಕಡಿಮೆ ಅಪಾಯಗಳು
(ಸಿ) ವಿದೇಶಿ ಮಾರುಕಟ್ಟೆಗಳಲ್ಲಿ ನಿಯಮಿತ ಉಪಸ್ಥಿತಿ
(ಡಿ) ಕಡಿಮೆ ಹೂಡಿಕೆ ಅಗತ್ಯಗಳು

5. ಈ ಕೆಳಕಂಡ ಯಾವ ಪ್ರವೇಶ ಪದ್ಧತಿಯಲ್ಲಿ ಹೆಚ್ಚಿನ ಮಟ್ಟದ ಅಪಾಯಗಳಿವೆ?
(ಎ) ಪರವಾನಗಿ ನೀಡಿಕೆ (ಬಿ) ವಿಶೇಷಾಧಿಕಾರ
(ಸಿ) ಒಪ್ಪಂದ/ಗುತ್ತಿಗೆ ಉತ್ಪಾದನೆ (ಡಿ) ಜಂಟಿ ವ್ಯಾಪಾರ

6. ಈ ಕೆಳಕಂಡ ಪ್ರವೇಶ ಪದ್ಧತಿಗಳಲ್ಲಿ ಯಾವುದು ಸಾಗರೋತ್ತರ ಕಾರ್ಯ ಚಟುವಟಿಕೆಗಳ ಮೇಲೆ ಹೆಚ್ಚಿನ ಮಟ್ಟದ ನಿಯಂತ್ರಣವನ್ನು ಹೊಂದಲು ಪರವಾನಗಿ ನೀಡುತ್ತದೆ?
(ಎ) ಪರವಾನಗಿ ಮತ್ತು ವಿಶೇಷಾಧಿಕಾರ ನೀಡಿಕೆಗಳು (ಬಿ) ಪೂರ್ಣ ಮಾಲೀಕತ್ವದ ಸಹಾಯಕ ಕಂಪನಿಗಳು
(ಸಿ.) ಒಪ್ಪಂದ/ಗುತ್ತಿಗೆ ಉತ್ಪಾದನೆ (ಡಿ) ಜಂಟಿ ಉದ್ದಿಮೆ

7. ಈ ಕೆಳಕಂಡ ಪ್ರವೇಶ ಪದ್ಧತಿಗಳಲ್ಲಿ ಯಾವುದು ಸಂಸ್ಥೆಯನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಹತ್ತಿರವಾಗಿಸುತ್ತದೆ?
(ಎ) ಪರವಾನಗಿ ನೀಡಿಕೆ (ಬಿ) ವಿಶೇಷಾಧಿಕಾರ ನೀಡಿಕೆ
(ಸಿ) ಒಪ್ಪಂದ/ಗುತ್ತಿಗೆ ಉತ್ಪಾದನೆ (ಡಿ) ಜಂಟಿ ಉದ್ದಿಮೆ

ಎರಡು ಅಂಕಗಳ ಪ್ರಶ್ನೆಗಳು

1. ಅಂತರರಾಷ್ಟ್ರೀಯ ವ್ಯವಹಾರವನ್ನು ವ್ಯಾಖ್ಯಾನಿಸಿ.
2. ಅಂತರರಾಷ್ಟ್ರೀಯ ವ್ಯವಹಾರಕ್ಕೆ ಯಾವುದಾದರೂ ಎರಡು ಕಾರಣಗಳನ್ನು ಕೊಡಿ.
3. ಪರವಾನಗಿ ನೀಡುವುದರ (ಲೈಸೆನ್ಸಿಂಗ್) ಅರ್ಥವನ್ನು ಬರೆಯಿರಿ.
4. ವಿಶೇಷಾಧಿಕಾರ ನೀಡುವುದು (ಫ್ರಾಂಚೈಸಿಂಗ್) ಎಂದರೇನು?
5. ವಿದೇಶಿ ನೇರ ಹೂಡಿಕೆ ಎಂದರೇನು?
6. ವಿನಿಯೋಜಿತ ಹೂಡಿಕೆ ಎಂದರೇನು?
7. ಗುತ್ತಿಗೆ ಉತ್ಪಾದನೆಯ ಅರ್ಥವನ್ನು ಬರೆಯಿರಿ.
8. ಪರಸ್ಪರ ಪರವಾನಗಿ (ಕ್ರಾಸ್ ಲೈಸೆನ್ಸಿಂಗ್) ನೀಡುವುದರ ಅರ್ಥವನ್ನು ಬರೆಯಿರಿ.
9. ಲೈಸೆನ್ಸಿಂಗ್ ಮತ್ತು ಫ್ರಾಂಚೈಸಿಂಗ್‌ಗಳಿಗಿರುವ ಎರಡು ವ್ಯತ್ಯಾಸಗಳನ್ನು ತಿಳಿಸಿ.
10. ಜಂಟಿ ಉದ್ದಿಮೆಯ ಅರ್ಥವನ್ನು ಬರೆಯಿರಿ.
11. ಜಂಟಿ ಉದ್ದಿಮೆಯನ್ನು ಸ್ಥಾಪಿಸುವ ಯಾವುದಾದರೂ ಎರಡು ವಿಧಾನಗಳನ್ನು ತಿಳಿಸಿ.
12. ಭಾರತ ವ್ಯಾಪಾರ ಮಾಡುವ ಯಾವುದಾದರೂ ಎರಡು ದೇಶಗಳನ್ನು ಹೆಸರಿಸಿ.
13. ನೇರ ರಫ್ತು/ಆಮದು ಎಂದರೇನು?
14. ಪರೋಕ್ಷ ರಫ್ತು/ಆಮದು ಎಂದರೇನು?

ಎಂಟು ಅಂಕಗಳ ಪ್ರಶ್ನೆಗಳು

1. ಅಂತರರಾಷ್ಟ್ರೀಯ ವ್ಯವಹಾರವು ದೇಶೀಯ ವ್ಯವಹಾರಕ್ಕಿಂತ ಹೇಗೆ ಭಿನ್ನವಾಗಿದೆ?
2. ಅಂತರರಾಷ್ಟ್ರೀಯ ವ್ಯವಹಾರದ ವ್ಯಾಪ್ತಿಯನ್ನು ವಿವರಿಸಿ.
3. ಅಂತರರಾಷ್ಟ್ರೀಯ ವ್ಯವಹಾರದಿಂದ ರಾಷ್ಟ್ರಗಳು ಮತ್ತು ಸಂಸ್ಥೆಗಳಿಗಾಗುವ ಪ್ರಯೋಜನಗಳನ್ನು ವಿವರಿಸಿ.
4. ರಫ್ತು ಮತ್ತು ಆಮದು ಮಾಡುವುದು ಎಂದರೇನು? ಅದರ ಅನುಕೂಲತೆಗಳು ಮತ್ತು ಮಿತಿಗಳನ್ನು ವಿವರಿಸಿ.
5. ಜಂಟಿ ಉದ್ದಿಮೆ ಎಂದರೇನು? ಅದರ ಅನುಕೂಲತೆಗಳು ಮತ್ತು ಮಿತಿಗಳನ್ನು ವಿವರಿಸಿ.

ಅಧ್ಯಾಯ 12

ಅಂತರರಾಷ್ಟ್ರೀಯ ವ್ಯವಹಾರ – 2

ಒಂದು ಅಂಕದ ಪ್ರಶ್ನೆಗಳು

1. DGFT ಅನ್ನು ವಿಸ್ತರಿಸಿ ಬರೆಯಿರಿ.
2. IEC ಅನ್ನು ವಿಸ್ತರಿಸಿ ಬರೆಯಿರಿ.
3. FTZ ಅನ್ನು ವಿಸ್ತರಿಸಿ ಬರೆಯಿರಿ.
4. EPZ ಅನ್ನು ವಿಸ್ತರಿಸಿ ಬರೆಯಿರಿ.
5. SEZ ಅನ್ನು ವಿಸ್ತರಿಸಿ ಬರೆಯಿರಿ.
6. ITO ಅನ್ನು ವಿಸ್ತರಿಸಿ ಬರೆಯಿರಿ.
7. GATS ಅನ್ನು ವಿಸ್ತರಿಸಿ ಬರೆಯಿರಿ.
8. EXIM ಅನ್ನು ವಿಸ್ತರಿಸಿ ಬರೆಯಿರಿ.
9. ರಫ್ತು ವ್ಯವಹಾರದ ಯಾವುದಾದರೊಂದು ದಾಖಲೆಯನ್ನು ಹೆಸರಿಸಿ.
10. ಆಮದು ವ್ಯವಹಾರದ ಯಾವುದಾದರೊಂದು ದಾಖಲೆಯನ್ನು ಹೆಸರಿಸಿ.
11. ಭಾರತದಲ್ಲಿ ಪ್ರಸ್ತುತ ಎಷ್ಟು ಸರಕು ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ?
12. ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದಾದರೊಂದು ಸರಕು ಮಂಡಳಿಯನ್ನು ಹೆಸರಿಸಿ.
13. ಭಾರತದಲ್ಲಿ ಪ್ರಸ್ತುತ ಎಷ್ಟು ರಫ್ತು ಪ್ರವರ್ಧನಾ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ?
14. ಯಾವುದಾದರೂ ಒಂದು ರಫ್ತು ಸಂಸ್ಕರಣಾ ವಲಯ(EPZ)ವನ್ನು ಹೆಸರಿಸಿ.
15. ರಫ್ತು ವ್ಯಾಪಾರದ ಪ್ರವರ್ಧನೆಗಾಗಿ ಭಾರತ ಸರ್ಕಾರವು ಸ್ಥಾಪಿಸಿರುವ ಯಾವುದಾದರೂ ಒಂದು ಸಂಸ್ಥೆಯನ್ನು ಹೆಸರಿಸಿ.
16. ವಿದೇಶ ವ್ಯಾಪಾರವನ್ನು ಪ್ರವರ್ಧಿಸಲು ಭಾರತ ಸರ್ಕಾರವು ಕೈಗೊಂಡಿರುವ ಯಾವುದಾದರೂ ಒಂದು ಯೋಜನೆಯನ್ನು ತಿಳಿಸಿ.
17. ಭರಾವಣೆ ಪತ್ರವನ್ನು ನೀಡುವ ಪ್ರಾಧಿಕಾರವನ್ನು ಹೆಸರಿಸಿ.
18. ವಾಯುಮಾರ್ಗ ಪತ್ರವನ್ನು ನೀಡುವ ಪ್ರಾಧಿಕಾರವನ್ನು ಹೆಸರಿಸಿ.
19. ಯಾವುದಾದರೂ ಒಂದು ಅಂತರ ರಾಷ್ಟ್ರೀಯ ವ್ಯಾಪಾರ ಸಂಸ್ಥೆಯನ್ನು ಹೆಸರಿಸಿ.

ಒಂದು ಅಂಕದ ಬಹು ಆಯ್ಕೆ ಪ್ರಶ್ನೆಗಳು

1. ಸರಕುಗಳನ್ನು ಹಡಗಿಗೆ ಹೇರಿದಾಗ ಹಡಗು ಆದೇಶಾಧಿಕಾರಿಯು ನೀಡುವ ರಶೀದಿಯು-----
   (ಎ) ಹಡಗಿಗೆ ಹೇರಿದ ರಶೀದಿ (ಬಿ)ಸಹಾಯಕ ಕಪ್ತಾನನ ರಶೀದಿ
   (ಸಿ) ಸರಕು ರಶೀದಿ (ಡಿ) ಚಾರ್ಟರ್ ರಶೀದಿ.
2. ಈ ಕೆಳಗಿನ ಯಾವುದು ರಫ್ತು ದಾಖಲೆಗಳಭಾಗವಾಗಿರುವುದಿಲ್ಲ?
   (ಎ) ವಾಣಿಜ್ಯ ಬಿಕರಿ ಪಟ್ಟಿ (ಬಿ) ಮೂಲೋತ್ಪತ್ತಿ ಪ್ರಮಾಣ ಪತ್ರ
   (ಸಿ) ಪ್ರವೇಶ ಪತ್ರ (ಡಿ) ಸಹಾಯಕ ಕಪ್ತಾನನ ರಶೀದಿ.
3. ಆಮದು ವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಅಗತ್ಯವಿರುವುದಿಲ್ಲ?
   (ಎ) ಭರಾವಣೆ ಪತ್ರ (ಬಿ) ಹಡಗು ರವಾನೆ ಪತ್ರ
   (ಸಿ) ಮೂಲೋತ್ಪತ್ತಿ ಪ್ರಮಾಣ ಪತ್ರ (ಡಿ) ಸಲಹಾ ಪತ್ರ
4. ರಫ್ತುದಾರನು ಬರೆದ ಹುಂಡಿಯನ್ನು ಮಾನ್ಯಮಾಡುವುದಾಗಿ ಬ್ಯಾಂಕು ನೀಡುವ ಭರವಸೆಯನ್ನು ಒಳಗೊಂಡಿರುವ ದಾಖಲೆಯು-----

(ಎ) ಅಡವು ಪತ್ರ
(ಬಿ) ಉದ್ದರಿ ಪತ್ರ
(ಸಿ) ಭರಾವಣೆ ಪತ್ರ
(ಡಿ) ಹುಂಡಿ ಪತ್ರ

ಎರಡು ಅಂಕಗಳ ಪ್ರಶ್ನೆಗಳು

1. ಮಾದರಿ ಬಿಕರಿಪಟ್ಟಿಯ ಅರ್ಥವನ್ನು ನೀಡಿ.
2. ರವಾನಾಪೂರ್ವ ಹಣಕಾಸು ಎಂದರೇನು?
3. ರವಾನಾಪೂರ್ವ ತಪಾಸಣೆಯ ಅವಶ್ಯಕತೆಯೇನು?
4. ಮೂಲೋತ್ಪತ್ತಿಯ ಪ್ರಮಾಣಪತ್ರ ಎಂದರೇನು?
5. ಮೂಲೋತ್ಪತ್ತಿಯ ಪ್ರಮಾಣಪತ್ರ ಏಕೆ ಅವಶ್ಯಕವಾಗಿದೆ?
6. ರವಾನಾ ಆದೇಶ ಎಂದರೇನು?
7. ಹಡಗಿನ ಕಪ್ತಾನನ ರಶೀದಿ ಎಂದರೇನು?
8. ಹಡಗು ಭರಾವಣಾ ಪತ್ರದ ಅರ್ಥವನ್ನು ನೀಡಿ.
9. ವಾಯುಮಾರ್ಗ ಪತ್ರ ಎಂದರೇನು?
10. ಉದ್ದರಿ ಪತ್ರದ ಅರ್ಥವನ್ನು ಬರೆಯಿರಿ.
11. ಪ್ರವೇಶ ಪತ್ರದ ಅರ್ಥವನ್ನು ಬರೆಯಿರಿ.
12. ಆಮದು ಸ್ಪಷ್ಟನೆ ಪತ್ರ ಎಂದರೇನು?
13. ಅಂತರರಾಷ್ಟ್ರೀಯ ವ್ಯವಹಾರವನ್ನು ಪ್ರವರ್ಧಿಸಲು ಸರ್ಕಾರವು ಕೈಗೊಂಡಿರುವ ಯಾವುದಾದರೂ ಎರಡು ಕ್ರಮಗಳು ಮತ್ತು ಯೋಜನೆಗಳನ್ನು ತಿಳಿಸಿ.
14. ಸುಂಕ ಹಿಂಪಡೆವ ಯೋಜನೆಯ ಅರ್ಥವನ್ನು ಬರೆಯಿರಿ.
15. ಮುಚ್ಚಳಿಕೆ ಅಧೀನ ರಫ್ತು ಉತ್ಪಾದನಾ ಯೋಜನೆ ಎಂದರೇನು?

ಎಂಟು ಅಂಕಗಳ ಪ್ರಶ್ನೆಗಳು

1. ರಫ್ತು ವ್ಯಾಪಾರದಲ್ಲಿ ಅಬಕಾರಿ ತೀರುವಳಿಯನ್ನು ಪಡೆಯುವವರೆಗೆ ಅನುಸರಿಸಬೇಕಾದ ಕ್ರಮಗಳನ್ನು ವಿವರಿಸಿ.
2. ರಫ್ತು ವ್ಯಾಪಾರದಲ್ಲಿ ಅಬಕಾರಿ ತೀರುವಳಿಯ ನಂತರ ಅನುಸರಿಸಬೇಕಾದ ಕ್ರಮಗಳನ್ನು ವಿವರಿಸಿ.
3. ಆಮದು ಕ್ರಮಾನುಗತಿಯಲ್ಲಿ ಒಳಗೊಂಡ ಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
4. ದೇಶದ ರಫ್ತುಗಳನ್ನು ಹೆಚ್ಚಿಸಲು ಭಾರತ ಸರ್ಕಾರವು ಯೋಜಿಸಿರುವ ಯಾವುದಾದರೂ ಎಂಟು ಕ್ರಮಗಳು ಮತ್ತು ಯೋಜನೆಗಳನ್ನು ವಿವರಿಸಿ.